ಆಂತರಿಕ ಪ್ರಸಾರಕ್ಕಾಗಿ ಮಾತ್ರ

ECHOES
INDIA

ಶ್ರೀ ರಾಮಚಂದ್ರ ಮಿಷನ್®

ನವಂಬರ್ 2014    ಸಂಪುಟ 7 ಸಂಚಿಕೆ 6





# ಮಣಪಾಕ್ಕಂ ವಾರ್ತೆ

## ಅಗಸ್ಟ್ , 2014

### ಅಗಸ್ಟ್ 3, ರವಿವಾರ

ಗುರುಗಳು ಸತ್ಸಂಗ ನಡೆಸಿಕೊಟ್ಟರು ಮತ್ತು ನಂತರ ಒಂದು ವಿವಾಹವನ್ನು ನೆರವೇರಿಸಿದರು. ಅವರ ಅಸ್ವಾಸ್ಥ್ಯದ ಅವಧಿಯಲ್ಲಿ ಅವರಲ್ಲಿದ್ದ ಯಾವುದೇ ನಳಿಕೆಗಳಿಲ್ಲದೆ ಅವರನ್ನು ನೋಡುವುದು ಹಿತಕರವಾಗಿತ್ತು; ಅವರು ಚೇತರಿಸಿಕೊಳ್ಳುತ್ತಿದ್ದಾರೆ ಎನ್ನುವುದಕ್ಕೆ ಅದೊಂದು ಚಿಹ್ನೆಯಾಗಿತ್ತು. ಅವರು ತನ್ನ ಕಛೇರಿಗೆ ಹಿಂತಿರುಗಿದಾಗ ಹಲವಾರು ಅಭ್ಯಾಸಿಗಳು ಅವರೊಂದಿಗೆ ಛಾಯಾಚಿತ್ರಗಳನ್ನು ತೆಗೆಸಿಕೊಂಡರು. ಅದೊಂದು ಪ್ರಫುಲ್ಲಿತ ಉಲ್ಲಾಸಕರ ಕ್ಷಣವಾಗಿತ್ತು. ಇದಾದ ನಂತರ ಗುರುಗಳು ಸುಮಾರಾಗಿ ಬಳಲಿದ್ದು ದಿನದ ಬಹು ಭಾಗ ವಿಶ್ರಾಂತಿಯಲ್ಲಿ ಕಳೆದರು.

ಸಾಯಂಕಾಲ, ಗುರುಗಳು 'ಸಮ್‌ವೇರ್ ಇನ್ ಟೈಮ್' ಎಂಬ ಸಮ್ಮೋಹನದ ಬಗೆಗಿನ ಚಿತ್ತಾಕರ್ಷಕವಾದ ಒಂದು ಚಲನಚಿತ್ರವನ್ನು ನೋಡಿದರು. ಗುರುಗಳು ಎರಡು ಗಂಟೆ ಅವಧಿಯ ಆ ಇಡೀ ಚಲನಚಿತ್ರವನ್ನು ರಾತ್ರಿ 9.00 ಗಂಟೆಯ ತನಕ ನೋಡಿದರು.

ಈ ವಾರದಲ್ಲಿ ಗುರುಗಳ ನಿಯತ ಕಾರ್ಯಕ್ರಮಗಳೆಂದರೆ, ಅವರು ಪೂರ್ವಾಹ್ನ ಸುಮಾರು 6.00 ಗಂಟೆಯ ಸುಮಾರಿಗೆ ಏಳುತ್ತಾರೆ, ಅವರ ಭೌತಿಕ ಚಿಕಿತ್ಸೆಯನ್ನು ಮುಗಿಸಿ ನಂತರ ಕಛೇರಿಗೆ ಬಂದು ಆಸೀನರಾಗುತ್ತಾರೆ ಮತ್ತು ದಿನಪತ್ರಿಕೆಯನ್ನು ಕೇಳಿಸಿಕೊಳ್ಳುತ್ತ ಬೆಳಗಿನ ಉಪಾಹಾರವನ್ನು ಸೇವಿಸುತ್ತಾರೆ. ತದನಂತರ ಅವರು ಬಿಸಿಲಿಗೆ ಮೈಯೊಡ್ಡಿ ಸ್ವಲ್ಪ ಸಮಯ ಕುಳಿತುಕೊಳ್ಳುತ್ತಾರೆ.

4ನೇ ತಾರೀಕಿನಂದು ಅವರು ಪೂರ್ವಾಹ್ನ 8.45ರ ಸುಮಾರಿಗೆ ಹೊರಗೆ ಬಂದರು ಮತ್ತು ಅಲ್ಲಿ ಉಪಸ್ಥಿತರಿದ್ದ ಕೆಲವರು ಅಭ್ಯಾಸಿಗಳಿಗೆ ಕಿರು ಅವಧಿಯ ಒಂದು ಬೈಠಕ್ಕನ್ನು ನೀಡಿದರು. ಮತ್ತೆ ಒಳಗೆ ಹೋಗಿ ದೂರದರ್ಶನದಲ್ಲಿ ಬೆಂಗಳೂರಿನ ಒಬ್ಬ ಅಭ್ಯಾಸಿ ವೈದ್ಯರ ಬಗೆಗಿದ್ದ ಒಂದು ಸಂದರ್ಶನವನ್ನು ನೋಡಿದರು. ಗುರುಗಳು ತುಂಬ ಆಸಕ್ತರಾಗಿದ್ದು ಅದನ್ನು ಅರ್ಧಗಂಟೆಗಿಂತಲೂ ಹೆಚ್ಚು ಕಾಲ ನೋಡುತ್ತಲಿದ್ದರು. ನಂತರ ಅವರು ಮೈಕೆಲ್ ಸಾಂಡೆಲ್‌ರ 'ಜಸ್ಟಿಸ್' ಎಂಬ ಧಾರಾವಾಹಿಯ ಒಂದು ಪ್ರಸಂಗವನ್ನು ನೋಡಿದರು ಮತ್ತು ಅದು ತನ್ನ ಮೆಚ್ಚಿನ ಕಾರ್ಯಕ್ರಮಗಳಲ್ಲಿ ಒಂದು ಎಂದರು.

### ಆಗಸ್ಟ್, 5–7, 2014

ಗುರುಗಳ ಉಪಾಹಾರದ ನಂತರ, ಸೋದರಿಯೊಬ್ಬರು, "ಮಾಸ್ಟರ್, ನಾನು ನಿಮ್ಮಿಂದ ದೂರವಿದ್ದೇನೆ, ಆದರೆ ನೀವು ನನ್ನೊಡನೆ ಇಲ್ಲವೆಂದು ನನಗೆಂದೂ ಅನಿಸಿಲ್ಲ" ಎಂದರು. ಗುರುಗಳೆಂದರು, "ಹೌದು, ಅದೇ ನಿರಂತರ ಸ್ಮರಣೆಯ ಶಕ್ತಿ. ನಾವು ಎಲ್ಲಿ ಇದ್ದರೂ ಪರವಾಗಿಲ್ಲ, ಗುರುಗಳು ಸದಾ ನಮ್ಮೊಂದಿಗೆ ಇರುತ್ತಾರೆ".

ಉಪಾಹಾರದ ನಂತರ, ಗುರುಗಳು ಹೊರಗೆ ಬಂದು ಬಿಸಿಲಿಗೆ ಮೈಯೊಡ್ಡಿ ತುಂಬಾ ಹೊತ್ತು ಕುಳಿತಿದ್ದರು. ಅವರು ಸೋ. ಜಾಕಿಯವರನ್ನು ಪ್ರಸಕ್ತ ಗಾಜ಼ಾ ಯುದ್ಧದ ಸದ್ಯದ ಪರಿಸ್ಥಿತಿಯ ಬಗ್ಗೆ ಕೇಳುತ್ತಿದ್ದರು. ಇಸ್ರೇಲ್ ಮತ್ತು ಪಾಲೆಸ್ತೀನ್‌ಗಳ ನಡುವಿನ ಈ ಹೋರಾಟದ ಇತಿಹಾಸವನ್ನು ತಿಳಿಯುವಲ್ಲಿಯೂ ಅವರು ಆಸಕ್ತರಾಗಿದ್ದರು. ಸೋ. ಜಾಕಿಯವರು ಎತ್ತಿದ ವಿವಿಧ ಅಂಶಗಳನ್ನು ಅವರು ಅತ್ಯಾಸಕ್ತಿಯಿಂದ ಕೇಳಿದರು ಮತ್ತು, "ಈ ಯಾವುದೇ ಯುದ್ಧಗಳ ಮುಖ್ಯ ಕಾರಣಗಳಲ್ಲಿ ಮತಧರ್ಮವು ಒಂದು" ಎಂದರು. ಪೂರ್ವಾಹ್ನ 11.30 ರ ಸುಮಾರಿಗೆ ಅವರು ಒಳನಡೆದರು.

6ನೇ ತಾರೀಕಿನಂದು ಪೂರ್ವಾಹ್ನ, ಓರ್ವ ಅಭ್ಯಾಸಿಯು ಗುರುಗಳನ್ನು ಕಾಣಲೆಂದು ಬಂದರು. ಗುರುಗಳು ಅವರಲ್ಲಿ, "ನೀವು ಸತ್ಸಂಗಗಳಿಗೆ ಹಾಜರಾಗುತ್ತಿಲ್ಲವೆಂದು ಕೇಳಿದೆ. ಏನಾಗಿದೆ?" ಎಂದು ಕೇಳಿದರು. ಆ ಅಭ್ಯಾಸಿ ಉತ್ತರಿಸಲಿಲ್ಲ. ಗುರುಗಳೆಂದರು, "ಬರೇ ಸೇವೆ ಸಲ್ಲಿಸಿದರೆ ಸಾಕು ಎಂದುಕೊಳ್ಳಬೇಡಿ. ನಾವು ಕರ್ತವ್ಯದ ಮೇರೆಯಲ್ಲಿ ಸೇವೆ ಮಾಡುತ್ತೇವೆ, ಆದರೆ ಅದು ನಮ್ಮನ್ನು ಮುಂದಕ್ಕೆ ಒಯ್ಯುವುದಿಲ್ಲ. ಅಭ್ಯಾಸಿಗಳು ಕ್ರಮಬದ್ಧವಾಗಿ ಅಭ್ಯಾಸವನ್ನು ಮಾಡಬೇಕಾಗಿದೆ." 7ನೇ ತಾರೀಕಿನಂದು, ಓರ್ವ ಅಭ್ಯಾಸಿಯು ಕೊಂಡ ಹೊಸ ಕಾರೊಂದನ್ನು ನೋಡಲೆಂದು ಗುರುಗಳು ಹೊರಗೆ ಬಂದರು. ಕಾರಿನೊಳಗಿನ ವಿವಿಧ ನಿಯಂತ್ರಣಗಳ ಕುರಿತಾಗಿ ಗುರುಗಳು ಪ್ರಶ್ನಿಸುತ್ತಿದ್ದರು ಮತ್ತು ವಿಶೇಷತಃ ಡಿಕ್ಕಿಯ ಗಾತ್ರದಿಂದ ಪ್ರಭಾವಿತರಾದರು. ತದನಂತರ ಅವರು ಹೊರಗೆ ಕುಳಿತು ಎಲ್ಲರಿಗೂ ಕೊಟ್ಟ ಒಂದು ಬೈಠಕ್, ಪೂರ್ವಾಹ್ನ 9.00 ಗಂಟೆಯ ಸತ್ಸಂಗದೊಂದಿಗೆ ಸಮನ್ವಯಗೊಂಡಿತು.

**ವ್ಹಿಸ್ಪರ್ಸ್ ಸಂದೇಶದ ಚರ್ಚೆ:** 9ನೇ ತಾರೀಕಿನಂದು, ಗುರುಗಳು ಕೆಲವು ವ್ಹಿಸ್ಪರ್ಸ್ ಸಂದೇಶಗಳ ಪ್ರತಿಯನ್ನು ಪರಿಶೀಲಿಸುತ್ತಿದ್ದರು, ಒಬ್ಬ ಅಭ್ಯಾಸಿಯು ಪುಸ್ತಕದಿಂದ ಕೆಲವು ಉದ್ಧೃತ ಅಂಶಗಳನ್ನು ಓದಿದರು. ಗುರುಗಳು



ಅತ್ಯಾಸಕ್ತಿಯಿಂದ ಆಲಿಸಿ, "ನಾನು ಬಹಳ ಹಿಂದೆ 'ಶ್ರೇಣಿವ್ಯವಸ್ಥೆ' (hierarchy) ಎಂಬ ಪದವನ್ನು ಬಳಸಿದ್ದೆ, ಈಗ ಬಾಬೂಜಿಯವರು ಈ ಪದವನ್ನು ವ್ಹಿಸ್ಪರ್ಸ್‌ನಲ್ಲಿ ಬಳಸುತ್ತಿದ್ದಾರೆ!" ಎಂದರು. ಎಲ್ಲರಿಗೂ ನಗೆಯುಕ್ಕಿತು.

ಅಲ್ಲಿ ಹದಿನೆಂಟು ವಯಸ್ಸಿಗಿಂತ ಕೆಳಗಿನ, ಅಭ್ಯಾಸವನ್ನು ಪ್ರಾರಂಭಿಸ ಬಯಸಿದ ನಾಲ್ಕು ಹುಡುಗ ಹುಡುಗಿಯರು ಇದ್ದರು. ಗುರುಗಳು ಅವರೆಲ್ಲರಿಗೂ ಒಂದು ಬೈಠಕ್ ಕೊಡಲು ಅತೀವ ಆಸಕ್ತರಾಗಿದ್ದರು. ಆದಾಗ್ಯೂ, ಅವರು ಸಾಕಷ್ಟು ಆಯಾಸಗೊಂಡಿದ್ದ ಕಾರಣ, ಸೋದರ ಕಮಲೇಶ್‌ರವರು ಬೈಠಕ್ ಕೊಡಲು ಒಪ್ಪಿದರು.

ಆಗಸ್ಟ್ 10 ರಂದು ರಕ್ಷಾ ಬಂಧನ (ಸೋದರ ಸೋದರಿಯರ ನಡುವಿನ ಪ್ರೀತಿಯ ಬಾಂಧವ್ಯವನ್ನು ಸಾರುವ ದಿನ). ಗುರುಗಳು 6.30ಕ್ಕೆ ಎದ್ದರು. ಮೊರಾದಾಬಾದಿನಿಂದ ಬಂದ ಸೋದರಿಯೊಬ್ಬರು ಗುರುಗಳ ಕೈಗೆ ರಾಖಿ(ರಕ್ಷೆ)ಯನ್ನು ಕಟ್ಟಿದರು. ಗುರುಗಳ ಕುಟುಂಬ ಆಗಮಿಸಿತು, ಗುರುಗಳು ಗೆಲವಿನಿಂದ ಕೂಡಿದ್ದರು. ಅವರು ಉಪಾಹಾರವನ್ನು ಸೇವಿಸಿದರು, ತತ್ಸಮಯದಲ್ಲಿ ಸೋದರ ಕಮಲೇಶ್‌ರವರು ಧ್ಯಾನಮಂದಿರದಲ್ಲಿ ಸತ್ಸಂಗವನ್ನು ನಡೆಸಿಕೊಟ್ಟರು. ಗುರುಗಳು ಕಣ್ಮುಚ್ಚಿಕೊಂಡು ದಿನಪತ್ರಿಕೆಯ ವಾಚನವನ್ನು ಆಲಿಸುತ್ತಿದ್ದರು. ಸತ್ಸಂಗ ಕೊನೆಗೊಂಡ ಹಾಗೆ ಗುರುಗಳು ಒಳಗಡೆ ಹೋಗಲಿಚ್ಛಿಸಿದರು.

ಅದಾದ ನಂತರ, ಗುರುಗಳು ಹೊರಗೆ ಬಂದು ಬಿಸಿಲಿನಲ್ಲಿ ಕುಳಿತರು, ಅವರ ಸುತ್ತಲಿದ್ದವರು ಮೌನವಾಗಿ ಕುಳಿತಿದ್ದರು. ಒಂದಿಬ್ಬರು ಸೋದರಿಯರು ಮುಂದಕ್ಕೆ ಬಂದು ಗುರುಗಳ ಕೈಗೆ ರಾಖಿಯನ್ನು ಕಟ್ಟಿದರು.

## ಗುರುವಾರ, 14 ಆಗಸ್ಟ್ 2014

ಬೆಳಗಿನ ಉಪಾಹಾರ ಮತ್ತು ಪತ್ರಿಕಾ ವಾಚನದ ತರುವಾಯ, ಗುರುಗಳು ಹಲವಾರು ಅಭ್ಯಾಸಿಗಳನ್ನು ಭೇಟಿಯಾದರು ಹಾಗೂ ಅವರ ಪ್ರಶ್ನೆಗಳಿಗೆಲ್ಲ ಉತ್ತರಿಸಿದರು. ಚೀನಾದಿಂದ ಬಂದ ಸೋದರಿಯೊಬ್ಬರು ಒಳಗೆ ಬಂದು, ಚೀನೀ ಭಾಷೆಯಲ್ಲಿ, "ಇಂದು ಪ್ರಾತಃಕಾಲ ತಮ್ಮನ್ನು ನೋಡಲು ನನಗೆ ಆನಂದವೆನಿಸಿದೆ" ಎಂದರು. ಗುರುಗಳು, "ಇಂದು ಪ್ರಾತಃಕಾಲ ನಿಮ್ಮನ್ನು ಎಲ್ಲ ಭಾಷೆಗಳಲ್ಲಿ ಕಾಣಲು ನನಗೆ ಆನಂದವೆನಿಸಿದೆ" ಎಂದು ಪ್ರತಿಕ್ರಿಯಿಸಿದರು. ಎಲ್ಲರೂ ನಗೆಸೂಸಿದರು. ಗುರುಗಳಿಗೆ ಸಾಕಷ್ಟು ಬಳಲಿಕೆಯಿದ್ದರೂ ಇಂಥ ಸರಳ ಮಾತಿನಿಂದ ಅವರು ವಾತಾವರಣವನ್ನು ತಿಳಿಗೊಳಿಸಿದ್ದರು. ಸೋದರಿಯೊಬ್ಬರು ತಾನು ಆ ದಿನ ಹೊರಡಲಿರುವೆನೆಂದೂ, ತಾನು ಜೀವನವೆಲ್ಲ ಪಾಲಿಸುವಂತೆ ಗುರುಗಳಿಂದ ಒಂದು ಸಂದೇಶವನ್ನು ಬಯಸುವೆನೆಂದೂ ಹೇಳಿದರು. ಗುರುಗಳೆಂದರು, "ಆತ ಪ್ರೀತಿಸುವ ಎಲ್ಲರನ್ನೂ ಪ್ರೀತಿಸಿ".

ಇದು ಲಾಲಾಜಿ ಮಹಾರಾಜರ ಮಹಾಸಮಾಧಿಯ ದಿನವಾಗಿತ್ತು ಆದರೆ ಗುರುಗಳು ಸುಸ್ತಾಗಿದ್ದ ಕಾರಣ, ಕುಟೀರದಲ್ಲಿ ಉಪಸ್ಥಿತರಿದ್ದವರಿಗೆ ಅವರು ಕಿರು ಅವಧಿಯ ಬೈಠಕ್ಕೊಂದನ್ನು ನೀಡಿದರು ಮತ್ತು ಸೋದರ ಕಮಲೇಶ್‌ರವರು ಧ್ಯಾನಮಂದಿರದಲ್ಲಿ ಪೂರ್ವಾಹ್ನ 9.00 ಗಂಟೆಯ ಸತ್ಸಂಗವನ್ನು ನಡೆಸಿಕೊಟ್ಟರು. ಸತ್ಸಂಗದ ನಂತರ ಓದಿದ ವ್ಹಿಸ್ಪರ್ಸ್ ಸಂದೇಶವು ದಿನದ ಮಹತ್ತ್ವವನ್ನು ಹಾಗೂ ಅದನ್ನು ಹೇಗೆ ನಿರಂತರ ಸ್ಮರಣೆಯಲ್ಲಿ ಕಳೆಯಬೇಕೆಂಬುದನ್ನು ಹೇಳಿತ್ತು.

## ಶುಕ್ರವಾರ, 15 ಆಗಸ್ಟ್ 2014

ಇದು ಭಾರತದ ಸ್ವಾತಂತ್ರ್ಯ ದಿನವಾಗಿದ್ದು, ವಲಯ ಸಂಚಾಲಕರಾದ ಸೋ. ವಿನೀತ್ ರಾಣಾವತ್‌ರವರು ಪೂರ್ವಾಹ್ನ 6.30 ಗಂಟೆಗೆ ಧ್ಯಾನಮಂದಿರದ ಸಮೀಪ ಧ್ವಜಾರೋಹಣಗೈದರು. ಸೋದರ ಕಮಲೇಶ್‌ರವರು ಪೂರ್ವಾಹ್ನ 9.00ಗಂಟೆಯ ಸತ್ಸಂಗವನ್ನು ನಡೆಸಿಕೊಟ್ಟರು. ತದನಂತರ ಒಂದು ವಿವಾಹವು ನವೇರಿಸಲ್ಪಟ್ಟಿತು. ಕಳೆದ ಕೆಲವು ದಿನಗಳಿಂದ ಗುರುಗಳಿಗೆ ಸ್ವಲ್ಪ ನಿಶ್ಶಕ್ತಿ ಕಂಡುಬಂದಿದ್ದು ಮತ್ತೆ ಅವರು ಅಸ್ವಸ್ಥರಾಗುವಂತೆ ಕಾಣಿಸುತ್ತಿತ್ತು. ವೈದ್ಯರು ಸಾಕಷ್ಟು ಮುಂಚಿತವಾಗಿ ಸಮಸ್ಯೆಯನ್ನು ಗುರುತಿಸಿ ಚಿಕಿತ್ಸೆಯನ್ನು ಪ್ರಾರಂಭಿಸಿದರು. ಹಾಗಾಗಿ ಅದು ಗುರುಗಳನ್ನು ಅಷ್ಟಾಗಿ ಬಾಧಿಸಲಿಲ್ಲ.

## ರವಿವಾರ, 31 ಆಗಸ್ಟ್ 2014

ಗುರುಗಳು 7.30ಕ್ಕೆ ಎದ್ದು ಬಂದು ತನ್ನ ಇ ಮೇಲ್‌ಗಳನ್ನು ನೋಡಲಾರಂಭಿಸಿದರು. ನಂತರ ಅವರು ಬೆಳಗಿನ ಉಪಾಹಾರವನ್ನು ಸ್ವೀಕರಿಸಿದರು ಮತ್ತು ದೀರ್ಘಾವಧಿಯ ಪತ್ರಿಕಾ ವಾಚನವನ್ನು ಆಲಿಸಿದರು. ಇದಾದ ನಂತರ ಅವರು ಸ್ವಲ್ಪ ಆಯಾಸಗೊಂಡು ಮಲಗುವಕೋಣೆಗೆ ತೆರಳಿದರು. ಅವರು ವಿಶ್ರಾಂತಿ ತೆಗೆದುಕೊಳ್ಳಬಹುದೆಂದು ಎಲ್ಲರೂ ಯೋಚಿಸುತ್ತಿದ್ದ ಸಮಯದಲ್ಲಿ ಅವರು ಹೊರಗೆ ನೆರಳಿನಲ್ಲಿ ಕುಳಿತುಕೊಳ್ಳಲು ಬಂದು ಅವರೆಲ್ಲರನ್ನೂ ಚಕಿತಗೊಳಿಸಿದರು. ಅನೇಕ ವಿಷಯಗಳ ಮೇಲೆ ಸುದೀರ್ಘವಾದ ಚರ್ಚೆ ನಡೆಸಿದರು. ಓರ್ವ ಅಭ್ಯಾಸಿಯು, "ಮಾಸ್ಟರ್, ನಾನೆಂದೂ ಪ್ರೇಮವನ್ನು ಒಂದು ಶಕ್ತಿಯೆಂದು ಭಾವಿಸಿರಲಿಲ್ಲ. ಸಹಜಮಾರ್ಗಕ್ಕೆ ಬಂದ ಮೇಲೆಯೇ ನಾನು ಪ್ರೇಮವು ಎಷ್ಟು ಪರಿಣಾಮಕಾರಿ ಎಂಬುದನ್ನು ಕಾಣಲು ಶಕ್ತನಾಗಿದ್ದೇನೆ" ಎಂದರು. ಆಶ್ರಮಗಳ ವಿಷಯವಾಗಿ ಮಾತನಾಡುತ್ತ ಗುರುಗಳು, "ಎಲ್ಲಿ ಮೂವತ್ತು ಅಥವಾ ಹೆಚ್ಚು ಅಭ್ಯಾಸಿಗಳಿದ್ದಾರೋ ಅಲ್ಲೆಲ್ಲ ಆಶ್ರಮಗಳಿರಬೇಕೆಂದು ನಾನು ಇಚ್ಛಿಸುತ್ತೇನೆ. ಏಕೆಂದರೆ ಆಗ ಬೈಠಕ್‌ಗಳು ಆಶ್ರಮದಲ್ಲೇ ನಡೆಯುವ ಕಾರಣ, ಅಭ್ಯಾಸಿಗಳಿಗೆ ಬೈಠಕ್ ಪಡೆಯಲೆಂದು ಯಾರದೋ ಮನೆಗೆ ಹೋಗುವ ಮುಜುಗರವಿರುವುದಿಲ್ಲ" ಎಂದರು.









## ಸೆಪ್ಟೆಂಬರ್ 2014

ಸೆಪ್ಟೆಂಬರ್ 12, ಶುಕ್ರವಾರ: ದ್ವಾರಕೆಯಲ್ಲಿ: ಗುರುಗಳು ಆಶ್ರಮದ ಹಿಂಭಾಗದಲ್ಲೇ ಇರುವ ದ್ವಾರಕಾ ವಸತಿ ಸಮುಚ್ಚಯದಲ್ಲಿ ತನ್ನ ವಸತಿಯ ಗೃಹಪ್ರವೇಶಕ್ಕೆಂದು ತೆರಳಿದರು. ಬೆಳಿಗ್ಗೆ ಸೋನೆ ಸುರಿಯುತ್ತಿತ್ತು. ಆದರೆ ಗುರುಗಳು ಸಿದ್ಧರಾಗಿ ತನ್ನ ಗಾಲ್ಫ್ ಗಾಡಿಯಲ್ಲಿ ತೆರಳಿದರು. ಅಲ್ಲಿ ನೆರೆದಿದ್ದ ಎಲ್ಲರಿಗಾಗಿ ಅವರು ಸತ್ಸಂಗವನ್ನು ನಡೆಸಿಕೊಟ್ಟರು. ಸತ್ಸಂಗದ ನಂತರ ಗುರುಗಳು ತೀರಾ ಬಸವಳಿದಿದ್ದರೂ, ತಾನು ಆಮಂತ್ರಿಸಿದ್ದ ಕೆಲವು ಅತಿಥಿಗಳಿಗೆ ಉಡುಗೊರೆಗಳನ್ನು ನೀಡುವ ಕೆಲಸವನ್ನು ಮುಗಿಸಿಬಿಡಲು ಇಚ್ಛಿಸಿದರು. ಅವರ ಆರೋಗ್ಯವನ್ನು ಪರಿಗಣಿಸಿ ವೈದ್ಯರು ಅವರನ್ನು ವಿಶ್ರಾಂತಿ ತೆಗೆದುಕೊಳ್ಳಲು ವಿನಂತಿಸಿದರೂ, ಗುರುಗಳು ತನ್ನ ಇಚ್ಛಾಶಕ್ತಿಯನ್ನು ಪ್ರಯೋಗಿಸಿ ತನ್ನೆಲ್ಲ ಕೆಲಸಗಳನ್ನು ಮುಗಿಸಿದರು ಹಾಗೂ ಎಲ್ಲವೂ ಮುಗಿದ ನಂತರ ಸ್ವಲ್ಪ ವಿಶ್ರಾಂತಿಗಾಗಿ ತೆರಳಿದರು.

ಸಾಯಂಕಾಲ, ಗುರುಗಳು ಸ್ವಲ್ಪ ಹೊತ್ತು ಸುಮಾರು ಮೂವತ್ತು ಅಭ್ಯಾಸಿಗಳೊಂದಿಗೆ ಕುಳಿತುಕೊಂಡಿದ್ದರು, ಮತ್ತೆ ಹಿಂದಿರುಗಿ ಒಳಗಡೆ ನಡೆದರು. ಅವರು ಸಂಜೆ ಬೇಗನೆ ನಿದ್ರಿಸಲು ಹೋದರು.

**ಸೆಪ್ಟೆಂಬರ್ 13,** ಶನಿವಾರ: ಗುರುಗಳು ಮತ್ತೆ ಕುಟೀರಕ್ಕೆ ಬಂದರು ಮತ್ತು ಸಾಕಷ್ಟು ಆಯಾಸಗೊಂಡಿದ್ದ ಕಾರಣ ಅವರು ಇಡೀ ದಿನ ವಿಶ್ರಾಂತಿಯನ್ನು ಪಡೆದರು.

**ಸೆಪ್ಟೆಂಬರ್ 15–19:** ಈ ವಾರವಿಡೀ ಬಹುತೇಕ ಸಮಯ ಗುರುಗಳು ವಿಶ್ರಾಂತಿ ಪಡೆಯುತ್ತಿದ್ದಾರೆ ಮತ್ತು ಸಾಂದರ್ಭಿಕವಾಗಿ, ಉಪಾಹಾರ ಅಥವಾ ಊಟಕ್ಕಾಗಿ ಕಛೇರಿಯಿಂದ ಹೊರಗೆ ಬರುತ್ತಿದ್ದು, ನಂತರ ಮತ್ತೆ ಮಲಗುವ ಕೋಣೆಯೊಳಗೆ ಹೋಗುತ್ತಿದ್ದಾರೆ. ಗುರುಗಳು ಯಾರನ್ನೂ ಭೇಟಿಯಾಗಲು ಲಭ್ಯರಿಲ್ಲದ ಕಾರಣ, ಗುರುಗಳನ್ನು ಭೇಟಿಯಾಗಲೆಂದು ಕುಟೀರವನ್ನು ಸಂದರ್ಶಿಸುತ್ತಿರುವ ಅಭ್ಯಾಸಿಗಳನ್ನು ಪರಿಮಿತಗೊಳಿಸಲಾಗಿದೆ. ಆದಾಗ್ಯೂ, ಅವರು ಕಛೇರಿಗೆ ಬರುವಾಗ ಅಲ್ಲಿ ಕೆಲ ಅಭ್ಯಾಸಿಗಳಿದ್ದರೆ, ಗುರುಗಳು ಅವರನ್ನು ಸ್ವಲ್ಪಹೊತ್ತು ಭೇಟಿಯಾಗುತ್ತಾರೆ. ಚೆನ್ನೈಯಲ್ಲಿ ಹವಾಮಾನವೂ ಘನಮೇಘಾವೃತವಾದ ಹಾಗೂ ಮಳೆಯ ವಾತಾವರಣವಿದ್ದು, ಕುಟೀರದಲ್ಲಿ ಹೆಚ್ಚು ಚಟುವಟಿಕೆ ಕಂಡುಬರದೆ ಎದ್ದುಕಾಣುವ ಈ ಗಂಭೀರ ಭಾವವನ್ನು ಪ್ರತಿಫಲಿಸುತ್ತಿದೆ. ಈ ತಿಂಗಳಲ್ಲಿ ಸಾಮಾನ್ಯವಾಗಿ ಗುರುಗಳು ಕುಟೀರಕ್ಕೇ ನಿರ್ಬಂದಿಸಲ್ಪಟ್ಟಿದ್ದಾರೆ.

ಬೆಳಿಗ್ಗೆ ಉಪಾಹಾರ ಮತ್ತು ಪತ್ರಿಕಾವಾಚನದ ನಂತರ, ಗುರುಗಳು ಹೊರಗೆ ಬಂದು ಬಿಸಿಲಿನಲ್ಲಿ ಕುಳಿತುಕೊಳ್ಳುವ ಸಮಯಗಳಿರುತ್ತವೆ. ಸೋದರಿ ಎಲಿಜ಼್‌ಬೆತ್‌ರವರು ಅವರಿಗಾಗಿ ಬಾಬೂಜಿ ಮಹಾರಾಜರ ಕೆಲವು ಪತ್ರಗಳನ್ನು ಹಾಗೂ ಲೇಖನಗಳನ್ನು ಓದುತ್ತಾರೆ. ಸೋದರಿ ಇವುಗಳನ್ನು ಮಿಷನ್‌ನ ಹೊಸ ಪುಸ್ತಕಕ್ಕಾಗಿ ಸಂಗ್ರಹಿಸುತ್ತಿದ್ದಾರೆ. ಸಾಮಾನ್ಯವಾಗಿ ಗುರುಗಳು ಬಿಸಿಲು ಕಾಯಿಸಲು ಬರುವಾಗ ಸಾಕಷ್ಟು ಆಯಾಸಗೊಂಡು ನಿಷ್ಕ್ರಿಯರಾಗಿರುತ್ತಾರೆ, ಆದರೆ ಸೋದರಿ ಎಲಿಜ಼ಬೆತ್‌ರವರು ಬಾಬೂಜಿಯವರ ಸಾಹಿತ್ಯವನ್ನು ಓದತೊಡಗಿದಂತೆ, ಗುರುಗಳು ತಲ್ಲೀನರಾಗುತ್ತಾರೆ. ಅವರ ಸುತ್ತಲೂ ಕುಳಿತಿರುವ ಅಭ್ಯಾಸಿಗಳೂ ಕಣ್ಣುಗಳನ್ನು ಮುಚ್ಚಿಕೊಂಡಿದ್ದು ಒಂದು ರೀತಿಯ ಸಂಪೂರ್ಣ ಶಾಂತಿ ಪಸರಿಸಿರುತ್ತದೆ. ವಾಚನ ಕಾರ್ಯಕ್ರಮ ಮುಗಿದಾಗ, ಗುರುಗಳು ಅಕ್ಷರಶಃ ದೇದೀಪ್ಯಮಾನರಾಗಿರುವುದನ್ನು ಕಾಣಬಹುದು. ಮತ್ತು ಅವರು ತನ್ನ ಕೊಠಡಿಗೆ ಹಿಂತಿರುಗಿದಾಗ ಅಭ್ಯಾಸಿಗಳನ್ನು ಸಂತೋಷವಾಗಿ ಭೇಟಿಯಾಗುವರು. ಇದು ಗುರುಗಳ ವಾಡಿಕೆಯ ದಿನಚರಿಯಿಂದ ಸ್ವಾಗತಾರ್ಹ ಬದಲಾವಣೆಯಾಗಿದ್ದು ಅವರು ಅದನ್ನು ನಿಜವಾಗಿಯೂ ಆಸ್ವಾದಿಸಿದರು.





## ಆಫ್ರಿಕಾ ವಿಚಾರಸಂಕಿರಣ– 'ಜೊತೆಗೆ ಇರುವುದು'

**13–21 ಆಗಸ್ಟ್ 2014**

ಅಂಗೋಲಾ, ಕ್ಯಾಮೆರೋನ್, ಕಾಂಗೋ(ಬ್ರಾಝಾವಿಲ್ಲೆ), ಕೋಟೆ ಡಿ'ಐವರಿ (ಐವರಿ ಕೋಸ್ಟ್) ಮತ್ತು ಗಾಬೊನ್‌ಗಳನ್ನು ಪ್ರತಿನಿಧಿಸುವ ಹನ್ನೆರಡು ಮಂದಿ ಅಭ್ಯಾಸಿಗಳು, ಆಫ್ರಿಕಾ ದೇಶಗಳಲ್ಲಿನ ಫ್ರೆಂಚ್ ಮಾತನಾಡುವವರಿಗಾಗಿ ಮಣಪಾಕ್ಕಂನಲ್ಲಿ ಏರ್ಪಡಿಸಿರುವ ವಾರಾವಧಿಯ ವಿಚಾರಸಂಕಿರಣದಲ್ಲಿ ಭಾಗವಹಿಸಲು ಬಂದಿಳಿದಿದ್ದಾರೆ. ವಿಚಾರಸಂಕಿರಣದ ಅವಧಿಯಲ್ಲಿ, ಅಭ್ಯಾಸಿಗಳು 'ಜೊತೆಗೆ ಇರುವ' ಅಗತ್ಯ ಮತ್ತು ಪ್ರಾಮುಖ್ಯತೆಯನ್ನು ಪ್ರತಿಪಾದಿಸುವ, ವ್ಹಿಸ್ಪರ್ಸ್‌ನ ಆಯ್ದ ಪಠ್ಯಗಳನ್ನು ವಿವರವಾಗಿ ಚರ್ಚಿಸಿದರು. ಕೋಟೆ ಡಿ'ಐವರಿಯಿಂದ ಬಂದ ಓರ್ವ ಸೋದರಿ ಮತ್ತು ಅಂಗೋಲಾದಿಂದ ಬಂದ ಓರ್ವ ಸೋದರನನ್ನು ಗುರುಗಳು ಪ್ರಶಿಕ್ಷಕರನ್ನಾಗಿ ಮಾಡಿದರು.

ಗುರುಗಳು ವಿಚಾರಸಂಕಿರಣದ ಉಪಾಂತ ದಿನ ಅದರಲ್ಲಿ ಭಾಗವಹಿಸಿದವರನ್ನೆಲ್ಲ ಕುಟೀರದಲ್ಲಿ ಬರಮಾಡಿಕೊಂಡರು ಮತ್ತು ಒಂದು ಬೈಠಕ್ ನೀಡಿದರು. ಅದು ಅತ್ಯಂತ ಆಳ ಹಾಗೂ ಗಾಢವಾಗಿತ್ತು. ಅವರಿಗೆ ಒಂದು ಪ್ರಶ್ನೋತ್ತರ ಅವಧಿ ಮತ್ತು ಸೋದರ ಕಮಲೇಶ್‌ರವರೊಂದಿಗೆ, ಸಾಧನೆಯ ವಿವಿಧ ಅಂಶಗಳ ಪ್ರಾಮುಖ್ಯತೆಯ ಕುರಿತಾದ, ತಲ್ಲೀನಗೊಳಿಸುವಂಥ, ಕಣ್ತೆರೆಸುವಂಥ ಇನ್ನೊಂದು ಅಧಿವೇಶನವಿತ್ತು. ಕಮಲೇಶ್‌ರವರು ತನ್ನ ಭಾಷಣವನ್ನು ಕೊನೆಗೊಳಿಸಿದ ಸಮಯದಲ್ಲಿ ಅಭ್ಯಾಸಿಗಳೆಲ್ಲ ಆಳವಾದ ಆಧ್ಯಾತ್ಮಿಕ ಅವಸ್ಥೆಯೊಂದರಲ್ಲಿ ಮುಳುಗಿದ್ದರು.

## ಓಣಂ ಆಚರಣೆ

**6–8 ಸೆಪ್ಟೆಂಬರ್ 2014**

ಸುಮಾರು 350 ಅಭ್ಯಾಸಿಗಳು, ಕೇರಳದಿಂದ 'ಓಣಂ' ಹಬ್ಬವನ್ನು ಗುರುಗಳೊಂದಿಗೆ ಆಚರಿಸಲೆಂದು ಮಣಪಾಕ್ಕಂಗೆ ಬಂದಿದ್ದರು. 'ತಿರುವೋಣಂ' ದಿನ(ಸೆಪ್ಟೆಂಬರ್ 7) ಅಭ್ಯಾಸಿಗಳೆಲ್ಲ ಸೇರಿ ಗುರುಗಳ ಕುಟೀರದ ಗೇಟಿನ ಎದುರು 'ಪೂಕ್ಕಳಂ'(ಹೂಗಳ ರಂಗವಲ್ಲಿ) ಹಾಕಿದರು. ಇದನ್ನು ನೋಡಲು ಗುರುಗಳು ಹೊರಬಂದು ಎಲ್ಲ ಅಭ್ಯಾಸಿಗಳಿಗೆ ಹಬ್ಬದ ಶುಭಾಶಂಸನೆಯನ್ನು ಮಾಡಿದರು. ಅಭ್ಯಾಸಿಗಳನ್ನು ಉದ್ದೇಶಿಸಿ ಅವರು, ಸಂಸ್ಕೃತಿ, ಭಾಷೆ ಮತ್ತು ಮತಧರ್ಮಗಳ ಯಾವುದೇ ವ್ಯತ್ಯಾಸಗಳನ್ನು ಮೀರಿದ ಸಾಮರಸ್ಯ ಮತ್ತು ಏಕತೆಯ ಅಗತ್ಯದ ಕುರಿತಾಗಿ ಮಾತನಾಡಿದರು ಮತ್ತು ಎಲ್ಲರಿಗೂ 'ಸಂತೋಷದ ಓಣಂ'ಅನ್ನು ಹಾರೈಸಿದರು. ಸ್ವಯಂಸೇವಕರು ಆಶ್ರಮದ ಅಡುಗೆಮನೆಯಲ್ಲಿ ಓಣಂ ಹಬ್ಬದೂಟ('ಸದ್ಯ')ವನ್ನು ತಯಾರಿಸಿದರು, ಇದನ್ನು ರವಿವಾರ ಸತ್ಸಂಗಕ್ಕೆ ಹಾಜರಾದ ಸುಮಾರು 3000 ಅಭ್ಯಾಸಿಗಳಿಗೆ ಬಡಿಸಲಾಯಿತು. ಸಂಜೆ ಧ್ಯಾನಮಂದಿರದಲ್ಲಿ ಅಭ್ಯಾಸಿ ಸೋದರಿಯರು ಸಾಂಸ್ಕೃತಿಕ ಕಾರ್ಯಕ್ರಮವೊಂದನ್ನು ನೀಡಿದ್ದು, ಗುರುಗಳು ಅದನ್ನು ಕುಟೀರದಲ್ಲೇ ವೀಕ್ಷಿಸಿ ಆನಂದಿಸಿದರು. 8ನೇ ತಾರೀಕಿನಂದು ಇನ್ನೊಂದು ಪೂಕ್ಕಳಂ ಅನ್ನು ಹಾಕಲಾಗಿತ್ತು, ಗುರುಗಳು ಅದನ್ನು ನೋಡಲೆಂದು ಹೊರಬಂದರು ಮತ್ತು ಆನಂತರ ಕುಟೀರದಲ್ಲಿ ಅವರು ಕೇರಳದಿಂದ ಬಂದ ಅಭ್ಯಾಸಿಗಳೊಡನೆ ಮಾತನಾಡಿದರು.

## ತಮಿಳುನಾಡು ಮತ್ತು ಕರ್ನಾಟಕದ ಪ್ರಶಿಕ್ಷಕರ ವಿಚಾರ ಸಂಕಿರಣ

**23–27 ಸೆಪ್ಟೆಂಬರ್ 2014**

ಮಣಪಾಕ್ಕಂನಲ್ಲಿ ನಡೆದ ಈ ಐದು ದಿನಗಳ ವಿಚಾರಸಂಕಿರಣದಲ್ಲಿ ಸುಮಾರು 400 ಪ್ರಶಿಕ್ಷಕರು ಭಾಗವಹಿಸಿದರು. ಸೋದರ ಕಮಲೇಶ್‌ರವರು ಪ್ರತಿದಿನ ಪೂರ್ವಾಹ್ನ 9.00ಗಂಟೆಗೆ ಸತ್ಸಂಗವನ್ನು ನಡೆಸಿಕೊಡುತ್ತಿದ್ದರು ಮತ್ತು ನಾಲ್ಕು ದಿನ ಪ್ರಶಿಕ್ಷಕರನ್ನುದ್ದೇಶಿಸಿ ಭಾಷಣ ಮಾಡಿದರು ಹಾಗೂ ಪ್ರಶಿಕ್ಷಕರು ಎತ್ತಿದ ಕೆಲವು ಮುಖ್ಯವಾದ ಪ್ರಶ್ನೆಗಳಿಗೆ ಉತ್ತರಿಸಿದರು. ಮೂರನೆಯ ದಿನ ಪ್ರಶಿಕ್ಷಕರನ್ನುದ್ದೇಶಿಸಿ ಗುರುಗಳು ವಿಚಾರಸಂಕಿರಣದ ವಿಷಯವಾದ 'ವಿನಮ್ರತೆ'ಯ ಕುರಿತು ಮಾತನಾಡಿದರು. ಅವರು, ವಿನಮ್ರತೆಯೆಂದರೆ ಒಳಗಡೆ ಮತ್ತು ಹೊರಗಡೆ ಒಂದೇ ರೀತಿ ಇರುವುದು, ಮತ್ತು ಸ್ವತಃ ತನಗೆ ತಾನು ಸತ್ಯವಂತನಾಗಿರುವುದು. ನಾನೆಂದೂ ನನ್ನ, ಪ್ರಶಿಕ್ಷಕ, ಹಿರಿಯ ಪ್ರಶಿಕ್ಷಕ, ಕಾರ್ಯದರ್ಶಿ, ಮತ್ತು ಮಿಷನ್‌ನ ಅಧ್ಯಕ್ಷನಾಗಿ ನನ್ನ ಪಾತ್ರಗಳ ಬಗ್ಗೆ ತಲೆ ಕೆಡಿಸಿಕೊಂಡಿರಲಿಲ್ಲ. ನನಗೆ ಬಾಬೂಜಿಯವರ ಶಿಷ್ಯನಾಗಿದ್ದುದು ಮಾತ್ರ ಸಾಕಾಗಿತ್ತು. ತನ್ನ ಬದುಕು ಮಿಷನ್ ಕೆಲಸವನ್ನು ಮಾತ್ರವೇ ಕೇಂದ್ರೀಕರಿಸಿತ್ತು ಮತ್ತು ಜೀವನದಲ್ಲಿ ಮಹತ್ತಮ ಹರ್ಷವು, ಬಾಬೂಜಿಯವರನ್ನು ಕಾಣಲು ಹೋಗುವಾಗ ಅವರ ಮುಖದಲ್ಲಿ ಮುಗುಳ್ನಗು ಕಾಣುವಂಥ ರೀತಿಯಲ್ಲಿ ಕೆಲಸಮಾಡುವುದರಲ್ಲಿದೆ. ತನಗೆ ಅದೇ ಶ್ರೇಷ್ಠತಮ ಪುರಸ್ಕಾರವಾಗಿತ್ತು ಎಂದರು.

ವಿಚಾರಸಂಕಿರಣದ ಅವಧಿಯಲ್ಲಿ ಗುರುಗಳಿಗೆ ಪ್ರಶಿಕ್ಷಕರ ಜೊತೆಗಿರಲು ಆಗದಿದ್ದರೂ ದಿನದ ಕಾರ್ಯಕಲಾಪಗಳ ಬಗ್ಗೆ ಅವರು ಸೌಲಭ್ಯಕಾರರಿಂದ ಅಧಿಕೃತ ಮಾಹಿತಿಗಳನ್ನು ಪಡೆಯುತ್ತಿದ್ದರು. ಅನೌಪಚಾರಿಕ ಮಾತುಕತೆಯೊಂದರಲ್ಲಿ ಗುರುಗಳು, ಪ್ರಶಿಕ್ಷಕರು ಅನುಕರಣೀಯ ವ್ಯಕ್ತಿಗಳಾಗುವುದು ಮುಖ್ಯವೆಂದರು.











"ಗುರುಗಳನ್ನು ಆಂತರೀಕರಿಸಿ ಮತ್ತು ಅವರ ಬೋಧನೆಗಳನ್ನು ಬಾಹ್ಯದಲ್ಲಿ ತೋರಿಸಿ" ಎಂದರು. ನಾವೆಲ್ಲರೂ ಅನುಸರಿಸಬೇಕಾದ ಅಭ್ಯಾಸ ಮಾಡಬೇಕಾದ ಗಾಢವಾದ ಮಾತಿದು.

ಕಮಲೇಶ ಭಾಯಿಯವರ ಉದ್ಘಾಟನಾ ಭಾಷಣವು ಅಭ್ಯಾಸಿಗಳೊಡನೆ ಪ್ರಶಿಕ್ಷಕರ ನಡವಳಿಕೆಯ ಬಗ್ಗೆ ಹಾಗು ಅವರೊಡನೆ ಮೊದಲ ಭೇಟಿಯ ಅನುಭವವು ಅಭ್ಯಾಸಿಗಳನ್ನು ಮಿಷನ್ನಿನಲ್ಲಿ ಮುಂದುವರೆಯುವಂತೆ ಮಾಡಲು ಹೇಗೆ ಬಹಳ ಮುಖ್ಯವಾಗುತ್ತದೆ ಎಂಬ ಅಂಶದ ಬಗ್ಗೆ ಕೇಂದ್ರೀಕೃತಗೊಂಡಿತ್ತು. ಉಳಿದ ದಿನಗಳಲ್ಲಿ ಅಭ್ಯಾಸಿಗಳ ಆಧ್ಯಾತ್ಮಿಕ ಸ್ಥಿತಿಯನ್ನು ಗ್ರಹಿಸುವುದು ಹೇಗೆ, ದಿವ್ಯಲೋಕದ ಪಿಸುಮಾತುಗಳ ಪ್ರಾಮುಖ್ಯತೆ ಹಾಗು ಅಭ್ಯಾಸಿಗಳು ತಮ್ಮ ತೀವ್ರವಾದ ಸಾಧನೆಯ ಮೂಲಕ ಇಂದಿನ ಪ್ರಪಂಚದಲ್ಲಿ ಬದಲಾವಣೆ ತರಲು ವಹಿಸಬೇಕಾದ ಪಾತ್ರವೇನು ಎಂಬ ವಿಷಯಗಳ ಬಗ್ಗೆ ಕಮಲೇಶ ಭಾಯಿಯವರು ಪ್ರಸ್ತಾಪಿಸಿದರು. ಅವರು ಸ್ವೀಕೃತಿಯನ್ನು ಕುರಿತು ಮಾತನಾಡುತ್ತ, ಹೇಗೆ ನಮ್ರತೆ, ನಿಷ್ಠೆ ಮತ್ತು ಪ್ರಾಮಾಣಿಕತೆಗಳು ಪದ್ಧತಿಯನ್ನು ಒಪ್ಪಿಕೊಳ್ಳಲು ನೆರವಾಗುತ್ತವೆ, ಮತ್ತು ದುರ್ದೈವದಿಂದ ನಾವು ಪೂರ್ವಗ್ರಹ, ದ್ವೇಷ, ಟೀಕೆಗಳೆಂಬ ಭಾರೀ ಹೊರೆಯನ್ನು ಹೊತ್ತೊಯ್ಯುತ್ತಿರುವೆವೆಂದು ವಿವರಿಸಿದರು. ನಾವು ಜನಗಳೊಂದಿಗೆ ತಾಳ್ಮೆಯಿಂದಿರುವುದನ್ನು ಕಲಿತರೆ, ಅದು ಸ್ವೀಕೃತಿಯೆಡೆಗೆ ತೆರಳಲು ಅನುವು ಮಾಡಿಕೊಡುವುದು.

ಕೇವಲ ತಮ್ಮ ಮಾತೃ ಭಾಷೆಯನ್ನು ಮಾತ್ರ ತಿಳಿದಿರುವ ಪ್ರಶಿಕ್ಷಕರುಗಳ ಸಲುವಾಗಿ ಗುರುಗಳು ಮತ್ತು ಕಮಲೇಶ್ ಭಾಯಿಯವರು ನೀಡಿದ ಭಾಷಣಗಳನ್ನು ತಮಿಳು ಮತ್ತು ಕನ್ನಡಕ್ಕೆ ಅನುವಾದಿಸಲಾಯಿತು. ಅವರುಗಳು ತಂಡಗಳಲ್ಲಿ ಚರ್ಚೆಗಳನ್ನು ನಡೆಸಿದರು. ವೈಯಕ್ತಿಕ ಬೈಠಕ್‌ಗಳ ವಿನಿಮಯ ಮಾಡಿಕೊಂಡರು ಹಾಗು ಅನೇಕ ರೀತಿಯ ಸ್ವಯಂ ಸೇವೆಗಳನ್ನು ನಡೆಸಿದರು. ಪ್ರತಿಯೊಬ್ಬ ಅಭ್ಯಾಸಿಗೂ ತಂಡದಲ್ಲಿ ಕೆಲಸಮಾಡುವುದರಿಂದ ಎಷ್ಟೊಂದು ಹರ್ಷದಾಯಕ ಎಂದು ಇವು ಕಲಿಸಿಕೊಟ್ಟವು.

## ಅಕ್ಟೋಬರ್ 2014

### ಚೀನಿಯರ ಸಮಾವೇಶ

**2–6 ಅಕ್ಟೋಬರ್ 2014**

ಚೀನಾದ ಮುಖ್ಯ ಭಾಗದಿಂದ (113) ಅಲ್ಲದೆ ಇತರೆ 3 ಟರ್ಕಿಯ ಅಭ್ಯಾಸಿಗಳು ಮತ್ತು ದಕ್ಷಿಣ ಆಫ್ರಿಕಾದ 16 ಅಭ್ಯಾಸಿಗಳು ಮಣಪ್ಪಾಕ್ಕಂನಲ್ಲಿ ನಡೆದ ಈ ಸಮಾವೇಶದಲ್ಲಿ ಭಾಗವಹಿಸಿದ್ದರು. ಸಮಾವೇಶದ ಸಂದರ್ಭದಲ್ಲಿ ಕಮಲೇಶ್ ಭಾಯಿಯವರು 3 ದಿನಗಳಂದು ಮತ್ತು ಅಕ್ಟೋಬರ್ 5 ರಂದು ನಡೆದ ಪ್ರಶ್ನೋತ್ತರ ಕಾರ್ಯಕ್ರಮದಲ್ಲಿ ಸಹ ತಂಡವನ್ನು ಉದ್ದೇಶಿಸಿ ಮಾತನಾಡಿದರು. ಸ್ಫೂರ್ತಿದಾಯಕವಾಗಿದ್ದ ಈ ಸಮಾವೇಶಗಳನ್ನು ಎಲ್ಲರೂ ಆನಂದಿಸಿ ಶ್ಲಾಘಿಸಿದರು. ಕಾರ್ಯಕ್ರಮಗಳ ಅವಧಿಯಲ್ಲಿ ಅವರು ಚೀನಿಯರು ಮತ್ತು ದಕ್ಷಿಣ ಆಫ್ರಿಕಾದ ಪ್ರಶಿಕ್ಷರೊಡನೆ ಎರಡು ಬಾರಿ ಸಭೆ ನಡೆಸಿದರು ಹಾಗು ಇದರ ನಡುವೆ ಉಪಯುಕ್ತ ಮಾಹಿತಿಗಳನ್ನು ಹಂಚಿಕೊಂಡು ಚರ್ಚೆ ನಡೆಸಲಾಯಿತು.

ಕೊನೆಯ ದಿನದ ಸಂಜೆಯಂದು ಚೀನಿ ಅಭ್ಯಾಸಿಗಳು ವಿಶೇಷವಾಗಿ ತಯಾರಿಸಿದ್ದ ರಾತ್ರಿಯ ಊಟವನ್ನು ಗ್ರಂಥಾಲಯದ ಮಾಡಿನ ಮೇಲೆ ಎಲ್ಲರು ಸವಿದರು. ಅಂದು ಕಮಲೇಶ ಭಾಯಿಯವರು ಗೌರವಾನ್ವಿತ ಅತಿಥಿಗಳಾಗಿದ್ದರು. ಸಂಜೆಯ ಸತ್ಸಂಗದ ನಂತರ ಅಭ್ಯಾಸಿಗಳಿಗೆ ಕುಟೀರದ ತೋಟದಲ್ಲಿ ಪ್ರತಿದಿನ ಗುರುಗಳೊಡನೆ ಅತ್ಯಮೂಲ್ಯ ಪ್ರಶಾಂತ ಕ್ಷಣಗಳನ್ನು ಕಳೆಯುವ ಸ್ವಲ್ಪ ಸಮಯ ಲಭ್ಯವಾಗುತ್ತಿತ್ತು. 5 ದಿನಗಳ ಸಮಾವೇಶದ ನಂತರ ಹಿಮಾಲಯದಲ್ಲಿರುವ ಸತ್ಕೋಲ್ ಆಶ್ರಮಕ್ಕೆ ಅಕ್ಟೋಬರ್ 7 ರಿಂದ 11 ರವರೆಗೆ 65 ಮಂದಿ ಚೀನಿ ಅಭ್ಯಾಸಿಗಳು ಭೇಟಿ ನೀಡಿದರು.








## ಮೊದಲ ವಾರ್ಷಿಕೋತ್ಸವದ ಆಚರಣೆ, ವಿಜಿಟಿಎಂ ಪ್ರಾದೇಶಿಕ ಆಶ್ರಮ, ಆಂಪ್ರ

ಈ ವಾರ್ಷಿಕೋತ್ಸವವನ್ನು ಕ್ಷೇತ್ರದ ಅಭ್ಯಾಸಿಗಳ ಅತ್ಯುತ್ಸಾಹಭರಿತ ಹುರುಪಿನಿಂದ ಸೆಪ್ಟೆಂಬರ್ 7ರ ಭಾನುವಾರದಂದು ಆಚರಿಸಲಾಯಿತು. 5 ಕೇಂದ್ರಗಳು ಮತ್ತು 20 ಉಪ ಕೇಂದ್ರಗಳನ್ನು ಪ್ರತಿನಿಧಿಸಿದ್ದ ಸುಮಾರು 1000 ಅಭ್ಯಾಸಿಗಳು ಭಾಗವಹಿಸಿದ ಈ ಕಾರ್ಯಕ್ರಮ ಒಂದು ಸಣ್ಣ ಭಂಡಾರದಂತೆ ಕಂಡು ಬಂದಿತು. ಈ ಕಾರ್ಯಕ್ರಮದ ಅಂಗವಾಗಿ 3 ಸತ್ಸಂಗಗಳು ಮತ್ತು ಅನೇಕ ಸಂಭಾಷಣೆಗಳು ನಡೆದವು. ಗುಂಟೂರು ಮತ್ತು ವಿಜಯವಾಡ ಕೇಂದ್ರದ ಮಕ್ಕಳು ನಡೆಸಿಕೊಟ್ಟ ಭಕ್ತಿ ಮತ್ತು ಪ್ರೇಮದ ಸಂದೇಶ ಹೊತ್ತ ಪ್ರಹಸನಗಳು, ಭಗವಾನ್ ಶ್ರೀಕೃಷ್ಣ ಮತ್ತು ಗೋಪಿಕೆಯರನ್ನು ಬಿಂಬಿಸುವ ನೃತ್ಯಗಳು, ಭಾವಪರವಶತೆಯಿಂದ ಅಭ್ಯಾಸಿಗಳು ಹಾಡಿದ ಕವಿತೆ ಮತ್ತು ಹಾಡುಗಳಿಂದ ನೆರೆದಿದ್ದ ಅಭ್ಯಾಸಿಗಳ ಹೃದಯಗಳು ದಿವ್ಯಪ್ರಭೆಯಿಂದ ತುಂಬಿಹೋದುವು. ಪ್ರೇಮ, ಸೇವೆ ಮತ್ತು ಒಗ್ಗಟ್ಟು – ಇವು ಮುಖ್ಯವಾಗಿ ಗಮನ ನೀಡಿದ ವಿಷಯಗಳಾಗಿದ್ದುವು. ದಿವ್ಯ ಲೋಕದ ಪಿಸುಮಾತುಗಳು, ಇತ್ತೀಚಿನ ಮಿಂಚುನೋಟಗಳು (ಗ್ಲಿಂಪ್ಸಸ್) ಮತ್ತು ಗುರುಗಳ ಕೆಲವು ಉಪನ್ಯಾಸಗಳು (ಡಿವಿಡಿ), ಇತ್ಯಾದಿಗಳ ಮೂಲಕ ಅಭ್ಯಾಸಿಗಳಲ್ಲಿ ಇರಬಹುದಾದ ಈ ಗುಣಗಳನ್ನು ಗುರುತಿಸಿ ಬೆಳೆಸುವ ವಿಷಯವನ್ನು ಬಹು ಶ್ರದ್ಧೆಯಿಂದ ತೋರಿಸಿಕೊಡಲಾಯಿತು.

## ಸಹಜಮಾರ್ಗ ರಸಪ್ರಶ್ನೆ, ನವಸಾರಿ, ಗುಜರಾತ್

ಅಕ್ಟೋಬರ್ 5 2014 ರಂದು ನವಸಾರಿ ಕೇಂದ್ರದಲ್ಲಿ ಸಹಜಮಾರ್ಗ ರಸಪ್ರಶ್ನೆಯನ್ನು ಏರ್ಪಡಿಸಲಾಗಿತ್ತು. ದೂರದರ್ಶನದಲ್ಲಿ ಪ್ರಸಾರವಾಗುವ ಬಹು ಜನಪ್ರಿಯ 'ಕೌನ್ ಬನೇಗ ಕರೋಡ್‌ಪತಿ' ಕಾರ್ಯಕ್ರಮದ ಮಾದರಿಯಲ್ಲಿ ಇದನ್ನು ನಡೆಸಲಾಯಿತು. ಅಭ್ಯಾಸಿಗಳಲ್ಲಿ ಹೆಚ್ಚಿನ ಉತ್ಸಾಹವನ್ನು ತುಂಬಲೆಂಬ ಈ ಕಲ್ಪನೆಯಿಂದ ರಸಪ್ರಶ್ನೆಯ ರೂಪವು ಹೊಸತನದಿಂದ ಬಹಳ ಆಕರ್ಷಕವಾಗಿ ಮೂಡಿ ಬಂದಿತು. ಅಭ್ಯಾಸಿ ಸಹೋದರರು ಗಣಕಯಂತ್ರದ ಮೂಲಕ ಕಾರ್ಯಕ್ರಮವನ್ನು ಸಿದ್ಧಪಡಿಸಿದ್ದರು. ಎಲ್ಲಾ ಪ್ರಶ್ನೆಗಳು ಮಿಷನ್ ಮತ್ತು ಸಹಜಮಾರ್ಗ ಸಾಧನೆ ಕುರಿತಂತೆ ಇದ್ದವು. ಆಟಗಳನ್ನಾಡಲು ಆಸಕ್ತಿ ತೋರಿದ ಅಭ್ಯಾಸಿಗಳಿಂದ 9 ಮಂದಿಯನ್ನು ಆಯ್ಕೆಮಾಡಲಾಯಿತು. ಒಟ್ಟು 13 ಪ್ರಶ್ನೆಗಳನ್ನು ಕುರಿತಂತೆ ಆಟಗಳನ್ನು ನಡೆಸಲಾಯಿತು. ರಸಪ್ರಶ್ನೆ ನಡೆದ ಸಮಯದಲ್ಲಿ ನೆರೆದಿದ್ದ ಪ್ರತಿಯೊಬ್ಬರೂ ಆಟದಲ್ಲಿ ಅತ್ಯುತ್ಸಾಹದಿಂದ ಭಾಗವಹಿಸಿದರು. ಮಿಷನ್ನಿನ ಪುಸ್ತಕಗಳು, ಗುರುಗಳ ಫೋಟೋಗಳು, ಸಿಡಿ/ಡಿವಿಡಿಗಳನ್ನು ಬಹುಮಾನವಾಗಿ ನೀಡಲಾಯಿತು.




## ಸೇವೆಮಾಡಲು ಸಿದ್ಧವಾಗಿರಿ, ನಂದ್ಯಾಲ ಆಶ್ರಮ

ವಲಯದಾದ್ಯಂತ ಶ್ರಮಿಸುತ್ತಿರುವ 170 ಮಂದಿ ಸ್ವಯಂಸೇವಕರ ತಂಡವೊಂದಕ್ಕಾಗಿ 3 ದಿನಗಳ ಸ್ನೇಹ ಕೂಟವನ್ನು ಸೆಪ್ಟೆಂಬರ್ 12 ರಿಂದ 14 ರವರೆಗೆ ಆ0ಯೋಜಿಸಲಾಗಿತ್ತು. ಉತ್ತಮವಾಗಿ ರೂಪಿಸಿದ್ದ ಮಾರ್ಗದರ್ಶಕ ಯೋಜನೆಯ ಮೂಲಕ ಎಲ್ಲಾ ಅಭ್ಯಾಸಿಗಳನ್ನು ಒಂದು ತಿಂಗಳಿಗಿಂತಲೂ ಹೆಚ್ಚು ಕಾಲ ತಯಾರು ಮಾಡಲಾಯಿತು. ಕಮಲೇಶ ಭಾಯಿಯವರ ನಿರಂತರವಾದ ಪ್ರೇಮಭರಿತ ಮಾಗದರ್ಶನದಲ್ಲಿ ವಲಯಾಧಿಕಾರಿ ಸೋ. ಗಂಗಾಧರರವರು 15 ಮಂದಿಯಿದ್ದ ತಂಡದೊಡನೆ ಕಾರ್ಯಕ್ರಮವನ್ನು ಆಯೋಜಿಸಿದ್ದರು.

ಪ್ರೇಮ, ಸೇವೆ ಮತ್ತು ಒಗ್ಗಟ್ಟು – ಇವು ಮುಖ್ಯವಾಗಿ ಗಮನ ನೀಡಿದವಿಷಯಗಳಾಗಿದ್ದುವು. ದಿವ್ಯ ಲೋಕದ ಪಿಸುಮಾತುಗಳು, ಇತ್ತೀಚಿನ ಗ್ಲಿಂಪ್ಸಸ್ ಮತ್ತು ಗುರುಗಳ ಕೆಲವು ಉಪನ್ಯಾಸಗಳು (ಡಿವಿಡಿ), ಇತ್ಯಾದಿಗಳ ಮೂಲಕ ಅಭ್ಯಾಸಿಗಳಲ್ಲಿ ಇರಬಹುದಾದ ಈ ಗುಣಗಳನ್ನು ಗುರುತಿಸಿ ಬೆಳೆಸುವ ವಿಷಯವನ್ನು ಬಹು ಶ್ರದ್ಧೆಯಿಂದ ತೋರಿಸಿಕೊಡಲಾಯಿತು.

ದಿನದ ಪ್ರಾರಂಭದಲ್ಲಿ ಸತ್ಸಂಗ ನಡೆಯುತ್ತಿದ್ದು, ತದನಂತರ ಹತ್ತು ನಿಮಿಷಗಳ ಮೌನ, ಜೊತೆಗೆ ಗ್ಲಿಂಪ್ಸಸ್‌ದ ಒಂದು ಪ್ರಸಂಗದ ಪ್ರದರ್ಶನವಿರುತ್ತಿತ್ತು. ದಿನದಲ್ಲಿ ಅನೇಕ ಕಾರ್ಯಕ್ರಮಗಳು ಇರುತ್ತಿದ್ದುವು. ಪ್ರತಿಯೊಂದರಲ್ಲೂ, ಆಯ್ದ ವಿಷಯವೊಂದರ ಬಗ್ಗೆ ದಿವ್ಯಲೋಕದ ಸಂದೇಶವನ್ನು ಓದಲಾಯಿತು. ಅಭ್ಯಾಸಿಗಳು ತತ್ಪರಿಣಾಮವಾಗಿ ಉಂಟಾದ ಕಂಪನಾನುಭವಗಳನ್ನು ಗಮನಿಸಿ, ಅನುಭವಿಸಿದ ತಮಗೆ ತೋರಿದ ಭಾವನೆ ಮತ್ತು ಅನುಭವಗಳನ್ನು ದಾಖಲಿಸಿಕೊಳ್ಳುವಂತೆ ತಿಳಿಸಲಾಯಿತು. ಅವರು ತಮ್ಮ ಆಂತರ್ಯದಲ್ಲಿ ಸ್ಥಿರವಾದ ಬದಲಾವಣೆಗಳನ್ನು ಕಂಡುಕೊಳ್ಳಲು ಸಾಧ್ಯವಾಯಿತು.

'ಅನಂತತೆಯ ತುಣುಕುಗಳು' ಮತ್ತು ಹೇಗೆ ಒಬ್ಬ ವ್ಯಕ್ತಿಯು ವಿಭಿನ್ನ ಪರಿಣಾಮವನ್ನು ತರಲು ಸಾಧ್ಯ ಎಂದು ಪ್ರೇರೇಪಿಸುವ ವೀಡಿಯೊ ಬಿತ್ತರಿಸಲಾಯಿತು. ಇದು ಗುರುಗಳು ತಿಳಿಸಿರುವ 'ಒಂದು ಹಕ್ಕಿ ವಸಂತವನ್ನು ಸೃಷ್ಟಿಸಬಲ್ಲುದು ಮತ್ತು ಒಬ್ಬ ವ್ಯಕ್ತಿ ವಿಶೇಷ ಪರಿಣಾಮ ಉಂಟುಮಾಡಬಲ್ಲನು' ಎಂಬ ಸೂಕ್ತಿಗೆ ಅನುಗುಣವಾಗಿತ್ತು. ಕಾರ್ಯಕ್ರಮಗಳ ಅನಂತರ ಪ್ರತಿದಿನ ಪ್ರಶಿಕ್ಷಕರ, ಯುವಜನರ ಹಾಗು ಇತರೆ ಸಭೆಗಳು ನಡೆದವು.

ನಮ್ಮ ಗುರುಗಳು ಮನುಕುಲದ ಸೇವೆಗೈಯ್ಯುವ ವೇಳೆಯಲ್ಲಿ ತಮ್ಮನ್ನೇ ಮರೆತು ತಮ್ಮ ಗುರುಗಳ ಬಗೆಗೆ ಮಾತ್ರವೇ ಚಿಂತಿಸುವ ಹಾಗೆ, ನಾವು ಯಾವುದೇ ಕೆಲಸ ಮಾಡುವ ವೇಳೆಯಲ್ಲಿ ಹೇಗೆ ಅವರ ಆದರ್ಶವನ್ನೇ ಕಣ್ಮುಂದೆ ತಂದುಕೊಂಡು ಅವರನ್ನು ಅನುಸರಿಸಬಹುದು ಎಂಬುದು ಈ ಸನ್ನಿವೇಶದಲ್ಲಿ ಬಹು ಮುಖ್ಯವಾಗಿ ಮೂಡಿ ಬಂದ ವಿಚಾರವೆನಿಸಿತು.

ಒಂದು ವಾರದ ನಂತರ ಮರುಮಾಹಿತಿಯನ್ನು (ಫ಼ೀಡ್ ಬ್ಯಾಕ್) ಸಂಗ್ರಹಿಸಲಾಯಿತು. ಅಭ್ಯಾಸಿಗಳು ಗುರುಗಳ ಪ್ರೇಮದ ಹಿಡಿತಕ್ಕೆ ಒಳಗಾಗಿ ಇನ್ನೂ ತೀವ್ರ ಆಸಕ್ತಿಯಿಂದ ತಮ್ಮ ಸಾಧನೆಯನ್ನು ಮಾಡಲು ಹಾಗು ತಮ್ಮ ಕೇಂದ್ರದಲ್ಲಿ ಮಾಡುವ ಕೆಲಸದಲ್ಲಿ ಪ್ರೇಮಪೂರಿತ ಸೇವಾಮನೋಭಾವ ಬೆಳೆಸಿಕೊಳ್ಳಲು ಉತ್ಸಾಹಗೊಂಡರು.

# ಪ್ರಶಿಕ್ಷಕರ ಸಭೆಗಳು

## ಉತ್ತರಾಖಂಡ



ಉತ್ತರಾಖಂಡದ ವಲಯ 18ರ ಎಲ್ಲ ಕೇಂದ್ರಗಳ ಉಸ್ತುವಾರಿಗಳು ಹಾಗು ಪ್ರಶಿಕ್ಷಕರ ಉಸ್ತುವಾರಿಗಳಿಗಾಗಿ ಎರಡು ದಿನಗಳ ಕೂಟವೊಂದನ್ನು, ವಲಯ ಉಸ್ತುವಾರಿಗಳ ಸಹಕಾರದಲ್ಲಿ, ಆಗಸ್ಟ್ 30 ಮತ್ತು 31ರಂದು ಹಿಮಾಲಯದ ಸತ್ಪೋಲ್ ಆಶ್ರಮದಲ್ಲಿ ಆಯೋಜಿಸಲಾಗಿತ್ತು. ಬಹಳ ಅನೌಪಚಾರಿಕವಾಗಿದ್ದ ವಾತಾವರಣದಲ್ಲಿ ಹದಿನೆಂಟು ಜನ ಅಭ್ಯಾಸಿಗಳು ಭಾಗವಹಿಸಿ ತಮ್ಮ ಕೇಂದ್ರಗಳಲ್ಲಿ ನಡೆದ ವಿವಿಧ ಚಟುವಟಿಕೆಗಳ ಬಗ್ಗೆ ಚರ್ಚಿಸಿದರು. ಹೃದಯವನ್ನು ಬಳಸಿಕೊಂಡು ಅನಾಯಾಸವಾಗಿ ಕೆಲಸ ಮಾಡುವುದು ಹೇಗೆ ಎಂಬದರ ಬಗೆಗಿನ ಅತ್ಯಂತ ಸ್ಪಷ್ಟವಾದ ಒಂದು ಅರಿವಿನೊಂದಿಗೆ ಕಾರ್ಯಕ್ರಮ ಕೊನೆಗೊಂಡಿತು. ಕಾರ್ಯಕ್ರಮದಲ್ಲಿ ಅದ್ಭುತವಾದ ಏಕತೆ ಹಾಗು ಒಗ್ಗಟ್ಟು ನೆಲೆಸಿತ್ತು.

## ಕಾಕಿನಾಡ, ಆಂಧ್ರಪ್ರದೇಶ

ಆಂಧ್ರಪ್ರದೇಶದ ವಲಯ 18ಬಿಯ ಇಪ್ಪತ್ತೈದು ಜನ ಪ್ರಶಿಕ್ಷಕರಿಗಾಗಿ ಕಾಕಿನಾಡ ಆಶ್ರಮದಲ್ಲಿ ಸಭೆಯೊಂದನ್ನು ನಡೆಸಲಾಯಿತು. ಬೆಳಗ್ಗೆ ಒಂಬತ್ತು ಘಂಟೆಯ ಸತ್ಸಂಗದ ನಂತರ, ವಲಯದ ಉಸ್ತುವಾರಿಯವರು ಸಭೆಯನ್ನುದ್ದೇಶಿಸಿ ಮಾತನಾಡಿ, ಸಹೋದರ ಕಮಲೇಶರೊಂದಿಗಿನ ತಮ್ಮ ಚರ್ಚೆಯಿಂದ ಅಮೂಲ್ಯ ಅಂಶಗಳನ್ನು ತಿಳಿಸಿದರು. ಬೈಠಕ್ ಕೊಡುವುದು ಹೇಗೆ, ಸ್ಥಿತಿಯನ್ನು ಅರಿಯುವುದು ಹೇಗೆ, ಬೈಠಕ್‌ನಲ್ಲಿ ಸಲಹೆಯ ಪಾತ್ರ, ಪ್ರಶಿಕ್ಷಕರ ಚಾರಿತ್ರ್ಯ ಮತ್ತು ವಿಸ್ಪರ್ಸ್ ಸಂದೇಶಗಳ ಪ್ರಾಮುಖ್ಯತೆ, ಹೀಗೆ ಹಲವಾರು ವಿಷಯಗಳ ಬಗೆಗೆ ಚರ್ಚೆ ನಡೆಯಿತು. ಊಟದ ನಂತರ, ಕಾಕಿನಾಡ ಆಶ್ರಮದಿಂದ ಇಪ್ಪತ್ತೆರಡು ಕಿ.ಮೀ ದೂರದಲ್ಲಿರುವ ಅಮರವಿಲ್ಲಿ ಆಶ್ರಮದಲ್ಲಿ ನಡೆದ ಸತ್ಸಂಗದೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು. ಮುಂದಿನ ತ್ರೈಮಾಸಿಕ ಸಭೆಯನ್ನು ಡಿಸೆಂಬರ್ 13 ರಂದು ವಿಶಾಖಪಟ್ಟಣ ಜಿಲ್ಲೆಯ ಎಜೆಆರ್ ನಗರದಲ್ಲಿ ನಡೆಸಲು ನಿರ್ಧರಿಸಲಾಯಿತು.



## ಪೂರ್ವ ರಾಜಸ್ಥಾನದ ಭಿಲ್ವಾರಕ್ಕೆ ವಲಯ ಪ್ರಮುಖರ ಭೇಟಿ

ವಲಯ 7ಬಿಯ ಪ್ರಮುಖರಾದ ಡಾ.ಜಿ. ಮಧುಕರ್ ಕೊಚಾರ್‌ರವರು ಪ್ರಶಿಕ್ಷಕ ಪೂರನ್‌ಮಲ್ ಬೈಂಡಾರವರೊಂದಿಗೆ ಸೆ. 28ರಂದು ಭಿಲ್ವಾರಕ್ಕೆ ಭೇಟಿಯಿತ್ತರು. ನೂರಹದಿನಾರು ಜನ ಅಭ್ಯಾಸಿಗಳು ಸತ್ಸಂಗದಲ್ಲಿ ಪಾಲ್ಗೊಂಡರು. ಅಭ್ಯಾಸಿಗಳನ್ನುದ್ದೇಶಿಸಿ ಮಾತನಾಡಿದ ಸಹೋದರ ಕೋಚಾರ್‌ರವರು ಗುರುಗಳೊಂದಿಗೆ ತಾವು ಕಳೆದಿದ್ದ ಸ್ಮರಣೀಯ ಕ್ಷಣಗಳನ್ನು ಹಂಚಿಕೊಂಡರು. ಒಬ್ಬ ಅಭ್ಯಾಸಿಯು ಮಿಷನ್ ಸೇರುವುದಕ್ಕಿಂತ ಬಹಳ ಮುಂಚಿತವಾಗಿಯೇ ಗುರುಗಳ ಕೆಲಸ ಅವರ ಮೇಲೆ ಆರಂಭವಾಗಿರುತ್ತದೆ ಮತ್ತು ನಮ್ಮನ್ನು ಮಿಷನ್ನಿಗೆ ಕರೆತರುವವರು ಗುರುಗಳೇ ಎಂದು ಅವರು ನುಡಿದರು. ಅಭ್ಯಾಸಿಗಳಿಂದ ಪ್ರಶ್ನೆಗಳನ್ನು ಮತ್ತು ಸ್ಪಷ್ಟೀಕರಣಗಳನ್ನು ಆಹ್ವಾನಿಸಿದ ಅವರು, ಯಾವುದೇ ಪ್ರಶ್ನೆಗಳನ್ನು ಹೊಂದದೆ ಇರುವುದು ಆಧ್ಯಾತ್ಮಿಕವಾಗಿ ಉತ್ತಮ ಸ್ಥಿತಿಯಾಗಿರುತ್ತದೆ ಎಂಬ ಮಾತಿನೊಂದಿಗೆ ಕಾರ್ಯಕ್ರಮದ ಮುಕ್ತಾಯ ಮಾಡಿದರು. ಉಪಾಹಾರದ ನಂತರ ಸಹೋದರ ಕೋಚರ್‌ರವರು ಭಿಲ್ವಾರದಲ್ಲಿ ಈಗಿನ ಧ್ಯಾನ ಮಂದಿರದಿಂದ 5 ಕಿ.ಮೀ. ದೂರದಲ್ಲಿ ಆಶ್ರಮಕ್ಕಾಗಿ ಪ್ರಸ್ತಾಪಿಸಲಾಗಿರುವ ಸ್ಥಳಕ್ಕೆ ಭೇಟಿಕೊಟ್ಟರು. ಅಲ್ಲಿ ಕಳೆದ ಅರ್ಧ ಘಂಟೆಯ ಸಮಯದಲ್ಲಿ, ಆ ಭೂಮಿಯ ಕುರಿತಾಗಿ ದೀರ್ಘವಾಗಿ ಚರ್ಚಿಸಿದ ಅವರು ಇನ್ನೂ ಪೂರ್ಣಗೊಳ್ಳಬೇಕಿರುವ ವಿಧಿವಿಧಾನಗಳ ಬಗೆಗೆ ತಿಳಿಸಿಕೊಟ್ಟರು. ಅವರ ಭಿಲ್ವಾರದ ಭೇಟಿಯು, ಮಿಷನ್ನಿಗಾಗಿ ನಿರಂತರವಾಗಿ ಕೆಲಸಮಾಡುವ ಹಾಗೆ ಅಲ್ಲಿನ ಅಭ್ಯಾಸಿಗಳನ್ನು ಪ್ರೇರೇಪಿಸಿತು.

## ನವರಾತ್ರಿ ಹಬ್ಬ, ವಡೋದರ, ಗುಜರಾತ್

ಅಕ್ಟೋಬರ್ 5ರಂದು ವಡೋದರದ ಮಕ್ಕಳು ಮತ್ತು ಯುವಕರು ನವರಾತ್ರಿ ಹಬ್ಬವನ್ನಾಚರಿಸಿದರು. ಅವರಲ್ಲಿ ಸುಮಾರು ಐವತ್ತು ಮಂದಿ ನವರಾತ್ರಿಯ ಸಾಂಸ್ಕೃತಿಕ ಉಡುಗೆಗಳನ್ನು ತೊಟ್ಟಿದ್ದರು. ಸತ್ಸಂಗದ ನಂತರ, ಅತೀ ಉತ್ಸಾಹ, ಪ್ರೇಮ ಮತ್ತು ಸೋದರತ್ವದ ಭಾವದಿಂದ ಒಂದೂವರೆ ಘಂಟೆಯ ಕಾಲ ನಡೆದ ಮಕ್ಕಳ ಗರ್ಬಾ ನೃತ್ಯ, ಗುರುಗಳಿಗಾಗಿ ಅರ್ಪಿಸಿದ ಭಕ್ತಿಪೂರ್ವಕ ನೃತ್ಯದಂತಿತ್ತು. ಮಕ್ಕಳ ಹುರುಪನ್ನು ನೋಡಿ ದೊಡ್ಡವರೂ ಅದರಲ್ಲಿ ಪಾಲ್ಗೊಂಡರು. ಲಘು ಉಪಾಹಾರದ ನಂತರ ಎಲ್ಲರೂ ಆಶ್ರಮದಿಂದ ತೆರಳಿದರು.





## ಯು–ಕನೆಕ್ಟ್ ಉಪಕ್ರಮಣ

### ಸ್ವಯಂ ವಿಕಸನ ಕೋರ್ಸ್, ಸಿಕ್ಕಿಂ ವಿಶ್ವವಿದ್ಯಾಲಯ



ಸಿಕ್ಕಿಂ ವಿಶ್ವವಿದ್ಯಾಲಯವು, ಶ್ರೀ ರಾಮಚಂದ್ರ ಮಿಷನ್ನಿನ ಯು–ಕನೆಕ್ಟ್ ಉಪಕ್ರಮಣದ ಅಡಿಯಲ್ಲಿ 'ಆಧ್ಯಾತ್ಮಿಕತೆಯ ನೆರಳಲ್ಲಿ ಸ್ವಯಂ ವಿಕಸನ – ಒಂದು ಪ್ರಾಯೋಗಿಕ ವಿಧಾನ' ಎಂಬ ಐಚ್ಛಿಕ ಪಠ್ಯವೊಂದನ್ನು ಆರಂಭಿಸಿತು. ಯುವ ಜನತೆಯು ಅಪೇಕ್ಷಿಸಬೇಕಾದಂತಹ ಜೀವನದ ಮೌಲ್ಯಗಳನ್ನು ತಿಳಿಸಿಕೊಡುವ ಉದ್ದೇಶದೊಂದಿಗೆ ಯು–ಕನೆಕ್ಟನ್ನು ಆರಂಭಿಸಲಾಗಿದೆ; ಅವರು ಒಂದು ಆಧ್ಯಾತ್ಮಿಕ ಗುರಿಯ ಮೇಲೆ ಕೇಂದ್ರೀಕೃತವಾದ ಸಮತೋಲಿತ ಜೀವನವನ್ನು ಮತ್ತು ನೈತಿಕವಾದ ಪ್ರಾಪಂಚಿಕ ಜೀವನವನ್ನು ಸಾಧಿಸಲು ಸಹಾಯ ಮಾಡಿ ರಾಷ್ಟ್ರ ನಿರ್ಮಾಣದಲ್ಲಿ ಭಾಗಿಯಾಗುವುದು.

ವಿದ್ಯಾರ್ಥಿಗಳು ಉತ್ತಮ ಮೌಲ್ಯಗಳನ್ನು ಅಳವಡಿಸಿಕೊಂಡು, ಅವರಲ್ಲಿ ಆಂತರಿಕ ರೂಪಾಂತರವು ಸ್ವಾಭಾವಿಕವಾಗಿ ನೆರವೇರಲು ಸಹಕರಿಸುವಂತಹ ವಿಷಯಗಳಾದ ಆತ್ಮಾವಲೋಕನ, ಚಿಂತನೆ ಹಾಗು ಧ್ಯಾನದಂತಹ ಕೌಶಲ್ಯಗಳೊಂದಿಗೆ ಅವರನ್ನು ಸಜ್ಜುಗೊಳಿಸುವಂತೆ ಈ ಪಠ್ಯವನ್ನು ವಿನ್ಯಾಸಗೊಳಿಸಲಾಗಿದೆ. ಪಠ್ಯದ ವಿಷಯಗಳೆಂದರೆ – ಮೌಲ್ಯಗಳು, ಆತ್ಮದ ಅನ್ವೇಷಣೆ, ಯೋಗ, ದೇವರ ಪರಿಕಲ್ಪನೆ, ಆಲೋಚನೆಯ ಶಕ್ತಿ, ಧ್ಯಾನದ ವಿಧಾನಗಳು, ಜೀವನದ ತತ್ವಗಳು, ಶ್ರೇಷ್ಠತೆಗಾಗಿ ಪ್ರಯತ್ನಿಸುವುದು, ನಮ್ಮ ಆಯ್ಕೆಗಳು ಮತ್ತು ಪ್ರೇಮ.

ಸಹೋದರ ಹರ್ಷಲ್ ಜವಲೆ (ಪುಣೆ), ಮಿಸಲ್ ಮೆಹ್ತ (ಕೋಲ್ಕತ್ತ), ರವಿ ತೆಲಂಗ್ (ಸಿಕ್ಕಿಂ) ಮತ್ತು ಸಹೋದರಿ ಎಲಿಜ್ಬೆತ್ ಕಿಂಗ್ಸ್‌ನಾರ್ತ್ (ಚೆನ್ನೈ) ಇವರುಗಳ ಸಹಾಯದೊಂದಿಗೆ ಈ ಪಠ್ಯವು ಸೆ. 6ರಂದು ಪ್ರಾರಂಭಗೊಂಡಿತು. ವಿದ್ಯಾರ್ಥಿಗಳ ಪ್ರತಿಕ್ರಿಯೆಯು ಸಕಾರಾತ್ಮಕವಾಗಿದ್ದು ಪ್ರೋತ್ಸಾಹದಾಯಕವಾಗಿತ್ತು. ಅವರ ಅವಶ್ಯಕತೆಗನುಗುಣವಾಗಿ ಪಠ್ಯವನ್ನು ಮಾರ್ಪಡಿಸುವಲ್ಲಿ ಕೂಡ ಅವರು ನೆರವಾದರು.

### ಅಧ್ಯಾಪಕವರ್ಗ ಮತ್ತು ಆಯೋಜಕರ ತರಬೇತಿ ಕಾರ್ಯಕ್ರಮ, ಪುಲ್ಗಾಂವ್ ಆಶ್ರಮ ಮಹಾರಾಷ್ಟ್ರ.

ಆಗಸ್ಟ್ 17 ಮತ್ತು 18ರಂದು, ಯು–ಕನೆಕ್ಟ್‌ನ ಇಪ್ಪತ್ನಾಲ್ಕು ಜನ ಅಧ್ಯಾಪಕರು ಹಾಗು ಆಯೋಜಕರಿಗಾಗಿ ತರಬೇತಿ ಕಾರ್ಯಕ್ರಮವೊಂದನ್ನು ಪುಲ್ಗಾಂವ್ ಆಶ್ರಮದಲ್ಲಿ ಆಯೋಜಿಸಲಾಗಿತ್ತು. ನಾಗಪುರ, ಚಂದ್ರಾಪುರ, ವಾರ್ಧಾ, ರಾಯ್‌ಫರ್ (ಚತ್ತಿಸ್‌ಘಡ), ಯಾವತ್ಮಲ್ ಮತ್ತು ಪುಲ್ಗಾಂವ್‌ಗಳಿಗೆ ಸೇರಿದ ಸ್ವಯಂ ಸೇವಕರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಮುಂಬೈನ ಶ್ರೀಧರ್ ಥೋಡ ಕಾರ್ಯಕ್ರಮವನ್ನು ನಡೆಸಿಕೊಟ್ಟರೆ, ಚಂದ್ರಾಪುರ ಕೇಂದ್ರದ ಉಸ್ತುವಾರಿ ಸುಧೀರ್ ಜಿ. ಅಕೋಜ್ವರ್‌ರವರು ಕಾರ್ಯಕ್ರಮವನ್ನು ಸಂಯೋಜಿಸಿದ್ದರು ಮತ್ತು ವಲಯದ ಉಸ್ತುವಾರಿ ಆರ್. ರಾಜೇಂದ್ರನ್ ಹಾಗು ಪುಲ್ಗಾಂವ್ ಕೇಂದ್ರದ ಸ್ವಯಂ ಸೇವಕರು ಕಾರ್ಯಕ್ರಮವನ್ನು ಆಯೋಜಿಸಲು ಉತ್ಸಾಹದಿಂದ ಕಾರ್ಯ ಮಾಡಿದರು.



ಗುಂಪುಗಳಲ್ಲಿ ಕೆಲಸ ಮಾಡಿದ ಅಭ್ಯಾಸಿಗಳು, 'ಅಣಕು ಸಭೆ'ಯೊಂದನ್ನು ಪ್ರದರ್ಶಿಸಿದರಲ್ಲದೆ ಆಟಗಳು ಮತ್ತಿತರ ಚಟುವಟಿಕೆಗಳಲ್ಲಿ ಭಾಗವಹಿಸಿದರು. ಸ್ಥಳೀಯ ಭಾಷೆಯಲ್ಲಿ ಕಾರ್ಯಕ್ರಮಗಳನ್ನು ನಡೆಸಲು ಅನುವಾಗುವಂತೆ, ಒಂದು ಅವಧಿಯನ್ನು ಮರಾಠಿ ಭಾಷೆಯ ಪ್ರಸ್ತುತಿಯೊಂದಿಗೆ ನಡೆಸಲಾಯಿತು. ಮುಕ್ತಾಯದ ಅವಧಿಯಲ್ಲಿ 'ಮಾರ್ಗ ಸೂಚಿ'ಯೊಂದನ್ನು ಯೋಜಿಸಲಾಯಿತು ಮತ್ತು ಅಧ್ಯಾಪಕವರ್ಗ ಉತ್ಸಾಹವನ್ನು ವ್ಯಕ್ತಪಡಿಸಿತು.

### ನಾಚಿಪಾಳಯಂ ಆಶ್ರಮ ಕೊಯಮತ್ತೂರು, ತಮಿಳುನಾಡು

ಆಗಸ್ಟ್ ಹದಿನೈದರಿಂದ ಹದಿನೇಳರವರೆಗೆ ಕೊಯಮತ್ತೂರಿನ ನಾಚಿಪಾಳಯಂ ಆಶ್ರಮದಲ್ಲಿ ನಡೆಸಲಾದ ಯು–ಕನೆಕ್ಟ್‌ನ ಮೂರು ದಿನದ ತರಬೇತಿ ಕಾರ್ಯಕ್ರಮದಲ್ಲಿ ತಮಿಳುನಾಡು ಹಾಗು ಕೇರಳದ ಸುಮಾರು ನೂರು ಅಭ್ಯಾಸಿಗಳು ಪಾಲ್ಗೊಂಡರು. ಪರಿಚಯ ಕಾರ್ಯಕ್ರಮದ ನಂತರ ಚೆನ್ನೈನ ಸಹೋದರರಾದ ಕೃಷ್ಣನ್ ಹಾಗು ಶ್ರೀರಾಮನ್ ಇವರುಗಳು – ಸಂಸ್ಥೆಗಳನ್ನು ಸಂಪರ್ಕಿಸುವುದು ಹೇಗೆ, ಆಯೋಜಕರು, ಸಂಯೋಜಕರು ಮತ್ತು ಅಧ್ಯಾಪಕವರ್ಗ ಇವರುಗಳ ಪಾತ್ರಗಳು ಹಾಗು ಜವಾಬ್ದಾರಿಗಳು, ಹೀಗೆ ಯು–ಕನ್‌ಕ್ಟ್‌ನ್ ಮನೋಭಾವಗಳ ಮೇಲೆ ಕಾರ್ಯಕ್ರಮ ನಡೆಸಿಕೊಟ್ಟರು. ಅವರು 'ಅಣಕು ಸಭೆ'ಗಳನ್ನು ಸಹ ನಡೆಸಿದರು. ಅಭ್ಯಾಸಿಗಳನ್ನು ಹನ್ನೆರಡು ಗುಂಪುಗಳಾಗಿ ವಿಂಗಡಿಸಿ, ಯು–ಕನ್‌ಕ್ಟ್‌ನ ಪಠ್ಯಕ್ರಮದಿಂದ ಒಂದೊಂದು ಅಧ್ಯಾಯವನ್ನು ಪ್ರತಿ ಗುಂಪಿಗೂ ನೀಡಲಾಗಿತ್ತು.

ಎರಡನೆಯ ಮತ್ತು ಮೂರನೆಯ ದಿನಗಳಲ್ಲಿ, ಪ್ರತಿ ಗುಂಪಿನವರೂ ವಿಭಿನ್ನ ವಿಷಯಗಳ ಬಗೆಗೆ 'ಅಣಕು ಸಭೆ'ಯನ್ನು ಮಂಡಿಸಿದರು. ಪ್ರತಿಕ್ರಿಯೆಯ ಅವಧಿ ಮತ್ತು ಕ್ರಿಯಾಶೀಲ ಯೋಜನೆಯನ್ನು ವಿವರಿಸುವ ಕಾರ್ಯದೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು. ಈ ತರಬೇತಿ ಕಾರ್ಯಕ್ರಮವು, ಕಾಲೇಜುಗಳಲ್ಲಿ ಸಭೆಗಳನ್ನು ನಡೆಸಲು ಅಗತ್ಯವಾದ ಧೈರ್ಯ ಮತ್ತು ಸಾಮರ್ಥ್ಯವನ್ನು ಭಾಗವಹಿಸಿದವರಿಗೆ ನೀಡಿತು.



ನಿಮಗೆ ನಿಮ್ಮ ಕೇಂದ್ರದಲ್ಲಿ ಪ್ರಾರಂಭಿಸುವ ಇಚ್ಛೆಯಿದ್ದಲ್ಲಿ,
uconnect@srcm.org ಗೆ ಈಮೇಲ್ ಕಳುಹಿಸಿ ಅಥವಾ ನಿಮ್ಮ
ವಲಯಮುಖ್ಯಸ್ಥರನ್ನು ಸಂಪರ್ಕಿಸಿ.

# ಯುವ ಕಾರ್ಯಕ್ರಮಗಳು

## ತಿರುಚ್ಚಿ, ತಮಿಳುನಾಡು



ವಲಯ 2ಬಿಗೆ ಸೇರಿದ, 28 ರಿಂದ 35 ವರ್ಷದೊಳಗಿನ ನಲವತ್ತೇಳು ಅಭ್ಯಾಸಿಗಳಿಗಾಗಿ ಎರಡು ದಿನದ ಕಾರ್ಯಕ್ರಮವೊಂದನ್ನು ಆಗಸ್ಟ್ 15 ಮತ್ತು 16 ರಂದು ತಿರುಚ್ಚಿಯ ಆಶ್ರಮದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಪ್ರಕೃತಿ ಚಿಕಿತ್ಸೆ, ಸ್ವ-ಅನ್ವೇಷಣೆ, ಸಾಂಘಿತ ಪ್ರಯತ್ನ, ಮುಂದಾಳತ್ವ ಹಾಗು ತನ್ನನ್ನು ತಾನು ಸಜ್ಜುಗೊಳಿಸಿಕೊಳ್ಳುವ ವಿಷಯಗಳಿದ್ದವು. ಅಡುಗೆಮನೆಯ ಸ್ವಯಂ ಸೇವಕರು ‘ಬೆಂಕಿರಹಿತ’ ಆಹಾರವನ್ನು ತಯಾರು ಮಾಡಿದರು.

ಯುವಜನರಿಗೆ, ಧ್ಯಾನ ಮತ್ತು ಸಹಜಮಾರ್ಗದ ಅಭ್ಯಾಸದ ಪ್ರಾಮುಖ್ಯತೆಯನ್ನು ಪುನರುಚ್ಚರಿಸುವಂತಹ ಕಾರ್ಯಕ್ರಮಗಳನ್ನು ಸಹ ಆಯೋಜಿಸಲಾಗಿತ್ತು. ಪ್ರವಚನಗಳು ಮತ್ತು ಭಾಷಣಗಳು ಅಭ್ಯಾಸಿಗಳಲ್ಲಿ ಕಿಡಿಯನ್ನು ಹೊತ್ತಿಸಿ, ಧೈರ್ಯದಿಂದ ಮುಂದುವರಿಯುವ ಸಂಕಲ್ಪ ಮಾಡಲು ಹಾಗು ಗುರುಗಳೇ ಹೇಳಿರುವಂತೆ ‘ಒಳಗಿನ ಸಿಂಹ ಘರ್ಜಿಸಲು’ ಅವಕಾಶವನ್ನಿತ್ತಿತು.

## ಬೆಂಗಳೂರು, ಕರ್ನಾಟಕ

ಸೆಪ್ಟೆಂಬರ್ 21ರಂದು, 'ಸಂವಹನ' ಎಂಬ ವಿಷಯದ ಮೇಲೆ ನಡೆದ ಒಂದು ದಿನದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಬೆಂಗಳೂರಿನ ಮೂವತ್ತೈದು ಯುವಕರು ಬನಶಂಕರಿ ಆಶ್ರಮದಲ್ಲಿ ಒಟ್ಟು ಸೇರಿದ್ದರು. ತಮ್ಮ ಆತ್ಮದೊಂದಿಗೆ ಸಮಾಲೋಚಿಸುವುದು, ಇತರರೊಂದಿಗೆ ಸಮಾಲೋಚಿಸುವುದು, ಆಲಿಸುವಿಕೆಯ ಪಾತ್ರ ಇವೇ ಮೊದಲಾದುವುಗಳ ಮಹತ್ವ ಮತ್ತು ಸಹಜಮಾರ್ಗದ ಬಗೆಗೆ ಇತರರೊಂದಿಗೆ ಮಾತನಾಡುವುದು ಹೇಗೆ ಎಂಬುದನ್ನು ತಿಳಿಸಿಕೊಡುವುದು ಕಾರ್ಯಕ್ರಮದ ಗುರಿಯಾಗಿತ್ತು. ಹೆಚ್ಚು ಸ್ಪಷ್ಟತೆಯನ್ನು ನೀಡುವ ದೃಷ್ಟಿಯಿಂದ ಪ್ರತಿ ಅವಧಿಯಲ್ಲೂ ಆಯಾ ವಿಷಯಗಳ ಕುರಿತಾಗಿ ಗುರುಗಳು ಮಾಡಿರುವ ಭಾಷಣದ ತುಣುಕುಗಳನ್ನು ತೋರಿಸಲಾಯಿತು. ‘ಆತ್ಮದೊಂದಿಗೆ ಸಮಾಲೋಚಿಸುವುದು’ ಈ ಕಾರ್ಯಕ್ರಮದ ಭಾಗವಾಗಿ ಪ್ರತಿಫಲಿಸಲು, ಧ್ಯಾನಿಸಲು ಪ್ರತಿಯೊಬ್ಬರಿಗೂ ಒಂದೊಂದು ‘ವಿಸ್ಪರ್ಸ್’ ಸಂದೇಶವನ್ನು ನೀಡಲಾಯಿತು. ವಿಚಾರಗಳು ಹಾಗು ಭಾವನೆಗಳನ್ನು ತನ್ನ ಸಹಅಭ್ಯಾಸಿಯೊಂದಿಗೆ ಹಂಚಿಕೊಳ್ಳಲು ಹೇಳಲಾಯಿತು. ‘ಫ್ಲಿಪ್ಪಿಂಗ್‌ದ ಸ್ವಿಚ್’ ಆಟವು, ವಿಭಿನ್ನ ಸನ್ನಿವೇಶಗಳು ಹಾಗು ವಾತಾವರಣಗಳಿಗೆ ಹೊಂದುವಂತಹ ವಿವಿಧ ರೀತಿಯ ಸಮಾಲೋಚನೆಗಳನ್ನು ಅವಲೋಕಿಸಿತು. ಮತ್ತೊಂದು ಆಟವು, ಉತ್ತಮ ಕೇಳುಗರಾಗಲು ಬೇಕಾದ ಕೌಶಲ್ಯ ಹಾಗು ಅದರ ಪ್ರಾಮುಖ್ಯತೆಗಳನ್ನು ಪ್ರದರ್ಶಿಸಿತು.

ನಿರ್ದಿಷ್ಟ ಪ್ರೇಕ್ಷಕರಿಗಾಗಿ ಗುರುಗಳು ನೀಡಿರುವ ಭಾಷಣಗಳನ್ನು ಪ್ರತಿ ಗುಂಪಿಗೂ ನೀಡಲಾಯಿತು. ಅದರ ಬಗೆಗೆ ಚರ್ಚಿಸಿದ ನಂತರ ಆ ಗುಂಪಿನಿಂದ ಒಬ್ಬರು ಅದರ ಬಗೆಗೆ ಮಾತನಾಡಿದರು. ಒಂದೇ ಪದವು, ವಿವಿಧ ರೀತಿಯ ಉಚ್ಚಾರಣೆ ಹಾಗು ಮುಖದ ಅಭಿವ್ಯಕ್ತಿಯೊಂದಿಗೆ ಹೇಗೆ ಅರ್ಥವನ್ನು ಬದಲಿಸುತ್ತದೆ ಎಂಬುದನ್ನು ‘ಓಹ್!’ ಆಟವು ತೋರಿಸಿಕೊಟ್ಟಿತು.

ಸಹಜ ಮಾರ್ಗದ ಮೂಲ ತತ್ವಗಳನ್ನು ಅರಿತುಕೊಳ್ಳುವ ಸಲುವಾಗಿ ಅಭ್ಯಾಸಿಗಳಿಗೆ ‘ಓದಲೇ ಬೇಕಾದ’ ಪುಸ್ತಕಗಳ ಪಟ್ಟಿಯೊಂದನ್ನು ನೀಡಲಾಯಿತು ಭಾನುವಾರಗಳಂದು, ಸ್ವಯಂ ಸೇವಾ ಕೆಲಸಗಳನ್ನು ಮುಗಿಸಿದ ನಂತರ ಸಮಯವಿರುವವರೆಲ್ಲಾ ಒಟ್ಟುಗೂಡಿ ಅರ್ಧ ಘಂಟೆಯ ಕಾಲ ‘ಪುಸ್ತಕ ವಾಚನ’ ಮಾಡಲು ತಿಳಿಸಲಾಯಿತು.

# ಪ್ರಬಂಧ ಮೌಲ್ಯ ಮಾಪನ ಕಾರ್ಯಕ್ರಮಗಳು

ಇತ್ತೀಚೆಗಷ್ಟೇ ಮುಕ್ತಾಯವಾದ 2014ರ ಪ್ರಬಂಧ ಸ್ಪರ್ಧೆಯ ಪ್ರಬಂಧಗಳ ಮೌಲ್ಯಮಾಪನವನ್ನು ವಲಯ ಮಟ್ಟದಲ್ಲಿ ನಡೆಸಲಾಯಿತು.



## ಭೋಪಾಲ್, ಮಧ್ಯ ಪ್ರದೇಶ, ವಲಯ 8ಎ

ಮೌಲ್ಯ ಮಾಪನದ ಮಾರ್ಗಸೂಚಿಗಳ ಬಗೆಗೆ ಜಾಗೃತಿಯನ್ನು ಮೂಡಿಸುವುದು ಕಾರ್ಯಕ್ರಮದ ಗುರಿಯಾಗಿತ್ತು. ಕೆಲವಷ್ಟು ಭಾಷಣಗಳ ನಂತರ ಎಲ್ಲರಿಗೂ ಕೊಡಲಾದ ಪ್ರಶ್ನಾವಳಿಯಿಂದ ಅನೇಕ ಸಂದೇಹಗಳು ಪರಿಹಾರವಾದವು. ಮೌಲ್ಯಮಾಪನ ಮಾಡಲು 'ಮಾದರಿ ಪ್ರಬಂಧ'ಗಳನ್ನು ನೀಡಿದ ನಂತರ ಮೌಲ್ಯ ಮಾಪನದ ಮಾನದಂಡ ಮತ್ತು ವಿಧಾನವನ್ನು ವಿತರಿಸಲಾಯಿತು. ಇದಾದ ನಂತರ ಮಾದರಿ ಪ್ರಬಂಧವನ್ನು ಮರು ಮೌಲ್ಯಮಾಪನ ಮಾಡಲು ಹೇಳಲಾಯಿತು. ಆಯೋಜಕರಾದ ಸುದರ್ಶನ್ ಸಿಂಗ್(ಬಹೇರಿ ಕೇಂದ್ರ) ಡಾ. ರಾಜೀವ್‌ಕುಮಾರ್ (ಆಗ್ರಾ ಕೇಂದ್ರ) ಮತ್ತು ವಿನೋದ್‌ಕುಮಾರ್(ಸೀತಾಪುರ ಕೇಂದ್ರ) ಇವರುಗಳೊಂದಿಗೆ ನಡೆದ ಮುಕ್ತ ಸಭೆ ಹಾಗು ಪ್ರತಿಕ್ರಿಯೆಯ ಅವಧಿಯೊಂದಿಗೆ ಕಾರ್ಯಕ್ರಮ ಕೊನೆಗೊಂಡಿತು.

## ಗಾಜಿಯಾಬಾದ್, ಯುಪಿ, ವಲಯ 12ಎ

ಪ್ರಾರಂಭದಲ್ಲಿದ್ದ 750 ಪ್ರಬಂಧಗಳಿಂದ 450 ಪ್ರಬಂಧಗಳನ್ನು ಆರಿಸಿ ತೆಗೆದ ಮೇಲೆ 40 ಪ್ರಬಂಧಗಳನ್ನು ಮಣಪಾಕ್ಕಂಗೆ ಕಳಿಸಲು ಆರಿಸಿಕೊಳ್ಳಲಾಯಿತು. ಸೆಪ್ಟೆಂಬರ್ 28 ಹಾಗು 29ರಂದು ಹತ್ತಿರದ ಕೇಂದ್ರಗಳಿಂದ ಸುಮಾರು 56 ಅಭ್ಯಾಸಿಗಳು ಮೌಲ್ಯಮಾಪಕರಾಗಿ ಉಪಸ್ಥಿತರಿದ್ದರು.





## ನಮ್ಮ ಸಾಧನೆಯ ನಿಯತೀಕರಣ

ದೆಹಲಿಯ ಜೋನಲ್ ಆಶ್ರಮದಲ್ಲಿ ಪ್ರತಿ ಭಾನುವಾರದಂದು 'ಡೈನಮಿಕ್ ಪ್ರಾಕ್ಟಿಸ್' ಎಂಬ ವಿಷಯದ ಬಗೆಗೆ ಹಿಂದಿಯಲ್ಲಿ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಆಗಸ್ಟ್‌ನಲ್ಲಿ ಆರಂಭವಾದ ಮೂರು ಘಂಟೆಗಳ ಈ ಕಾರ್ಯಕ್ರಮದ ನಂತರ ಸತ್ಸಂಗ ಜರುಗುತ್ತದೆ. ಇಲ್ಲಿಯವರೆಗೆ ಈ ಕೆಳಗಿನ ವಿಷಯಗಳನ್ನು ಚರ್ಚಿಸಲಾಗಿದೆ; ಸಹಜಮಾರ್ಗ ಸಾಧನೆಯ ಮೂಲತತ್ವ, ಗುರು, ಭ್ರಾತೃತ್ವ, ದಿನಚರಿ ಬರೆಯುವುದು, ಶುದ್ಧೀಕರಣ, ಧ್ಯಾನ ಹಾಗು ಚಾರಿತ್ರ್ಯ ನಿರ್ಮಾಣದ ಪರಿಕರಗಳು. ಅಕ್ಟೋಬರ್‌ನಿಂದ ಹತ್ತು ನಿಯಮಗಳ ಕುರಿತಾದ ಕಾರ್ಯಕ್ರಮ ಆರಂಭಗೊಳ್ಳಲಿದೆ. ಅಭ್ಯಾಸಿಗಳಿಗೆ ತಮ್ಮ ಮೂಲ ಸಾಧನೆಯಲ್ಲಿ ಒಂದು ಹೊಸದಾದ ಪ್ರಚೋದನೆಯನ್ನು ಕೊಡುವುದು ಇದರ ಗುರಿಯಾಗಿದೆ. ಈ ಕಾರ್ಯಕ್ರಮವು ಅಭ್ಯಾಸಿಗಳಿಗೆ ಧ್ಯಾನದ ವಿಧಾನದ ಬಗೆಗೆ ಸ್ಪಷ್ಟತೆಯನ್ನು ನೀಡಿದ್ದು, ಅವರುಗಳು ತಮ್ಮನ್ನೇ ತೆರೆದುಕೊಳ್ಳಲು, ಪರಿಣಾಮಕಾರಿಯಗಿ ವ್ಯವಹರಿಸಲು ಮತ್ತು ಭಾತೃತ್ವವನ್ನು ಅನುಭವಿಸಲು ನೆರವು ನೀಡಿದೆ.

### ಒಂಗೋಲ್, ಆಂಧ್ರಪ್ರದೇಶ



ಸಾಧನೆಯನ್ನು ನಿಯತಿಗೊಳಿಸುವ ಪ್ರಯತ್ನದಲ್ಲಿ, ಏಳು ದಿನಗಳ ಕಾರ್ಯಕ್ರಮವೊಂದನ್ನು ಸೆಪ್ಟೆಂಬರ್ 24ರಿಂದ ಅ.4ರವರೆಗೆ ನಡೆಸಲಾಯಿತು. ಹದಿನೆಂಟು ಅಭ್ಯಾಸಿಗಳು ಇದರಲ್ಲಿ ಭಾಗವಹಿಸಿದರು. ನಿರಂತರ ಸ್ಮರಣೆ ಮತ್ತು ಹತ್ತು ನಿಯಮಗಳು ಸೇರಿದಂತೆ ಸಾಧನೆಯ ಎಲ್ಲ ಅಂಶಗಳನ್ನು ನಿಖರವಾಗಿ ಡಿವಿಡಿ ಹಾಗು ಪಿಪಿಟಿಗಳ ಮೂಲಕ ವಿವರಿಸಲಾಯಿತು. ಕೇಂದ್ರದ ಉಸ್ತುವಾರಿ ಸಹೋದರ ಭಾಸ್ಕರ್‌ರವರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅಭ್ಯಾಸಿಗಳಿಗೆ ಪ್ರೋತ್ಸಾಹ ನೀಡಿದರು.

### ಕರುಮತಂಪಟ್ಟಿ, ಪಶ್ಚಿಮ ತಮಿಳುನಾಡು

ಕೊಯಮತ್ತೂರಿನಿಂದ 20 ಕಿ.ಮಿ. ದೂರದಲ್ಲಿರುವ ಕರುಮತಂಪಟ್ಟಿಯ ಮೂವತ್ತು ಅಭ್ಯಾಸಿಗಳು 'ಅನುಭವಗಳ ವಿನಿಮಯ' ಎಂಬ ಕಾರ್ಯಕ್ರಮದಲ್ಲಿ



ಪಾಲ್ಗೊಂಡರು. ಸೆಪ್ಟೆಂಬರ್ 21 ರಂದು ನಡೆದ ಈ ಕಾರ್ಯಕ್ರಮವನ್ನು ಸಹೋದರಿ ಎ.ಕೆ. ಮುತ್ತು ಲಕ್ಷ್ಮೀಯವರು ಆಯೋಜಿಸಿದ್ದರು. ಕಾರ್ಯಕ್ರಮವು, ಸಹಜಮಾರ್ಗಕ್ಕೆ ಸೇರಿದ ಮೇಲೆ ನಮ್ಮಲ್ಲಾಗುವ ಬದಲಾವಣೆಗಳ ಮೇಲೆ ಕೇಂದ್ರಿತವಾಗಿತ್ತು. ಅಭ್ಯಾಸಿಗಳು ಹಂಚಿಕೊಂಡಂತೆ ಅವರಲ್ಲಾದ ಬದಲಾವಣೆಗಳೆಂದರೆ; ಗುರುಗಳೆಡೆಗೆ ಹೆಚ್ಚುತ್ತಿರುವ ಪ್ರೇಮ ಹಾಗು ಶ್ರದ್ಧೆ, ಕಡಿಮೆಯಾಗುತ್ತಿರುವ ಕೋಪ ಮತ್ತು ಅಸೂಯೆ, ಹೆಚ್ಚಾದ ಸಹಿಷ್ಣುತೆ ಮತ್ತು ಸಹನಶೀಲತೆ, ಹೆಚ್ಚಿದ ಆತ್ಮವಿಶ್ವಾಸ, ಆಲೋಚನೆಗಳ ಕ್ಷೀಣತೆ, ಹೆಚ್ಚಿನ ಸರಳತೆ ಮತ್ತು ಬಲವಾದ ಭ್ರಾತೃತ್ವ ಭಾವನೆ ಇವೇ ಮುಂತಾದವುಗಳು. ಎಲ್ಲರ ಅನುಭವಗಳನ್ನು ಆಲಿಸುವುದು ಕುತೂಹಲಕಾರಿಯಾಗಿತ್ತು ಮತ್ತು ಎಲ್ಲ ಅಭ್ಯಾಸಿಗಳೂ ಕಾರ್ಯಕ್ರಮದಲ್ಲಿ ಆನಂದಪಟ್ಟರು.

### ಗುಲ್ಬರ್ಗ, ಕರ್ನಾಟಕ



ಸೆಪ್ಟೆಂಬರ್ 6 ಮತ್ತು 7 ರಂದು 'ಮಿಷನ್ನಿನ ಸಾಹಿತ್ಯವನ್ನು ಓದುವುದರ ಪ್ರಾಮುಖ್ಯತೆ' ಎಂಬ ವಿಷಯವಾಗಿ ಆಶ್ರಮದಲ್ಲಿ ಕಾರ್ಯಕ್ರಮವನ್ನು ನಡೆಸಲಾಯಿತು. ಗುಲ್ಬರ್ಗ, ಬೀದರ್, ಹುಮ್ನಾಬಾದ್, ಚಂಗ್ಲೇರ್, ಚಿತಾಪುರ್, ಸೇಡಂ, ಚಿಂಚೋಳಿ, ಶೋರಾಪುರ, ಗೋಗಿ ಮತ್ತು ಮುಂತಾದ ಕೇಂದ್ರಗಳಿಂದ ಸುಮಾರು 150 ಅಭ್ಯಾಸಿಗಳು ಭಾಗವಹಿಸಿದರು. ಬೆಳಗಿನ ಸತ್ಸಂಗದ ನಂತರ ನಡೆದ ವಿಸ್ತಾರವಾದ ಕಾರ್ಯಕ್ರಮದಲ್ಲಿ, ಹಲವಾರು ಉದಾಹರಣೆಗಳೊಂದಿಗೆ ಗುರುಗಳ ಆಡಿಯೋ ಮತ್ತು ವಿಡಿಯೋ ತುಣುಕುಗಳನ್ನು, ಗ್ರಾಫಿಕ್ ವಿನ್ಯಾಸಗಳನ್ನು ತೋರಿಸಲಾಯಿತು. ಸಂಜೆಯ ಸತ್ಸಂಗದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು. ಎಲ್ಲ ಅಭ್ಯಾಸಿಗಳೂ ಕಾರ್ಯಕ್ರಮವು ಲಾಭದಾಯಕವಾಗಿತ್ತೆಂದು ತಿಳಿಸಿದರು ಮತ್ತು ಅತೀವ ಸಂತೋಷ ವ್ಯಕ್ತಪಡಿಸಿದರು.

### ತಿರುಚ್ಚಿ, ಪೂರ್ವ ತಮಿಳುನಾಡು

ಸೆಪ್ಟೆಂಬರ್ 14ರಂದು ಏಕದಿನದ ಕೇಂದ್ರಗಳ ಸಭೆ ನಡೆಯಿತು. ತಮಿಳುನಾಡಿನ ವಲಯ 2 ಬಿಯಲ್ಲಿ ವಿಲ್ಲುಪುರಂ, ತಿರುಚ್ಚಿ ಹಾಗು ತಂಜಾವೂರು ಈ ಮೂರು ಕೇಂದ್ರಗಳಿವೆ.ಭ್ರಾತೃತ್ವದ ಭಾವನೆಯನ್ನು ಭದ್ರಪಡಿಸಲು, ಪ್ರತಿಯೊಂದು ಕೇಂದ್ರದಿಂದ ಮೂರು ನಾಲ್ಕು ತಿಂಗಳಿಗೊಮ್ಮೆ ಒಂದು ದಿನದ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತದೆ. 'ಗುರಿಯೆಡೆಗೆ ತಲುಪುವುದು' ಇದು ಕಾರ್ಯಕ್ರಮದ ವಿಷಯವಾಗಿತ್ತು. ಸಹಿಷ್ಣುತೆ, ಸಂಕಲ್ಪ, ಶರಣಾಗತಿ, ಸೇವೆ, ವಿಧೇಯತೆ, ನಂಬಿಕೆ ಹಾಗು ಶ್ರದ್ಧೆ ಈ ವಿಷಯಗಳ ಮೇಲೆ ಪ್ರತಿ ಕೇಂದ್ರದವರೂ ತಯಾರಿ ನಡೆಸಿಕೊಂಡು ಬಂದಿದ್ದರು. ಮಕ್ಕಳ ಮತ್ತು ಯುವಕರ ಸಾಂಸ್ಕೃತಿಕ ಕಾರ್ಯಕ್ರಮದೊಂದಿಗೆ ದಿನದ ಪ್ರಾರಂಭವಾಯಿತು. ವಿಷಯಗಳ ಚರ್ಚೆಯ ನಂತರ, ಸಂಜೆಯ ಸತ್ಸಂಗದೊಂದಿಗೆ ಕಾರ್ಯಕ್ರಮ ಮುಗಿಯಿತು.

## ಕಡಲೂರ್, ಪೂರ್ವ ತಮಿಳುನಾಡು



ವಿಲ್ಲುಪುರಂ, ನೈವೇಲಿ, ಪಾಂಡಿಚೆರಿ, ಕಡಲೂರ್ ಮತ್ತು ಇತರೆ ಉಪಕೇಂದ್ರಗಳಿಂದ ಬಂದ ಸುಮಾರು 120 ಅಭ್ಯಾಸಿಗಳು ಸೆಪ್ಟೆಂಬರ್ 21ರಂದು ನಡೆದ ವಾರ್ಷಿಕ ಕೂಟದಲ್ಲಿ ಪಾಲ್ಗೊಂಡರು. SMSF ಗೆ ಧ್ಯಾನಮಂದಿರವನ್ನು ಕೊಡುಗೆಯಾಗಿ ನೀಡಿದ ನಂತರ ನಡೆದ ಮೊದಲ ಬೃಹತ್ ಸಮಾರಂಭವಿದು. ಸಹಜಮಾರ್ಗದ ಮೂಲತತ್ವಗಳ ಕುರಿತ ಚರ್ಚೆಯ ನಂತರ, 'ಜ್ಞಾನೋದಯ'ದ ಬಗೆಗೆ ಉಪನ್ಯಾಸವಿದ್ದಿತು. 'ಇಂಡಿಯಾ ಇನ್ ದಿ ವೆಸ್ಟ್' ಡಿವಿಡಿಯನ್ನು ಪ್ರದರ್ಶಿಸಲಾಯಿತು. ಅಭ್ಯಾಸಿಗಳಿಬ್ಬರು ಸೋದರ ಪ್ರಶಾಂತ್ ವಾಸುರವರ 'ಅಟ್ ದ ಫೀಟ್ ಆಫ್ ದ ಮಾಸ್ಟರ್' ಪುಸ್ತಕವನ್ನು ಕುರಿತು ಪ್ರಸ್ತುತಿಯನ್ನು ನೀಡಿದರು.

## ವಡೋದರ, ಗುಜರಾತ್



ವಡೋದರ ನಗರವನ್ನು 7 ವಲಯಗಳನ್ನಾಗಿ ವಿಂಗಡಿಸಲಾಗಿದೆ. ಪ್ರತಿ ವಲಯದಲ್ಲಿ ಒಂದು ಸ್ವಯಂಸೇವಕರ ತಂಡವು ಅಲ್ಲಿನ ಚಟುವಟಿಕೆಗಳ ಹೊಣೆ ಹೊತ್ತುಕೊಂಡಿದೆ. ಸಾಧನೆಯ ಗುಣಮಟ್ಟವನ್ನು ಅಧಿಕಗೊಳಿಸಲು ಗೃಹಕೂಟಗಳು, ಮುಕ್ತಸಭೆಗಳು ಮತ್ತಿತರ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಸೆಪ್ಟೆಂಬರ್ 13ರಂದು, ಮಕರಪುರ ಮತ್ತು ಮಂಜಲ್‌ಪುರದ ಸುಮಾರು 45 ಅಭ್ಯಾಸಿಗಳು 'ಜೀವನದ ಗುರಿ' ಕುರಿತ ಕಮ್ಮಟಕ್ಕಾಗಿ ಸೇರಿದ್ದರು. ಸತ್ಸಂಗದ ನಂತರ, ಅಭ್ಯಾಸಿಗಳಿಗೆ ತಮ್ಮ ಜೀವನದ ಗುರಿಯನ್ನು ದಿನಚರಿಯಲ್ಲಿ ಬರೆಯುವಂತೆ ಹೇಳಿ, ಅವರಿಗೆ ಅವಲೋಕನ ಮಾಡಿಕೊಳ್ಳಲು ಮೂರು ಪ್ರಶ್ನೆಗಳನ್ನು ನೀಡಲಾಯಿತು. ಸತ್ಯೋದಯದ 'ಜೀವನದ ಗುರಿ' ಅಧ್ಯಾಯದ ಭಾಗವೊಂದನ್ನು ಓದಿದ ನಂತರ ಭಾಗಿಗಳನ್ನು ಚಿಕ್ಕ ತಂಡಗಳನ್ನಾಗಿ ವಿಂಗಡಿಸಿ ತಮ್ಮ ಅನಿಸಿಕೆಗಳನ್ನು ವ್ಯಕ್ತ ಪಡಿಸಲು ಅನುವು ಮಾಡಿಕೊಡಲಾಯಿತು. ಪ್ರಶಿಕ್ಷಕ ಸೋದರರೊಬ್ಬರು ಮಾತನಾಡಿದ ನಂತರ ಅಭ್ಯಾಸಿಗಳು ತಮ್ಮ ಅನುಭವಗಳನ್ನು ಹಂಚಿಕೊಂಡರು. ಕೊನೆಯಲ್ಲಿ ಅವರು ತಮ್ಮ ನವ್ಯ ಚಿಂತನೆಯ ಪ್ರಕಾರ ಮತ್ತೊಮ್ಮೆ ಜೀವನದ ಗುರಿಯನ್ನು ದಿನಚರಿಯಲ್ಲಿ ಬರೆದರು. ಹಾಗಾಗಿ ಈ ಕಾರ್ಯಾಗಾರವು ಫಲಪ್ರದವಾಗಿದ್ದಿತು.



## ತಿರುಪ್ಪೂರು, ಪಶ್ಚಿಮ ತಮಿಳುನಾಡು

ಅಕ್ಟೋಬರ್ 5ರಂದು, ಚೆಟ್ಟಿಪಾಳ್ಯಂ ಆಶ್ರಮದಲ್ಲಿ ಬೆಳಗಿನ ಸತ್ಸಂಗದ ನಂತರ ಸೋ. ಎನ್. ಪ್ರಕಾಶ್‌ರವರು ಸೆಪ್ಟೆಂಬರ್ ತಿಂಗಳಿನಲ್ಲಿ ಮಣಪಾಕ್ಕಂ ಆಶ್ರಮದಲ್ಲಿ ನಡೆದ ಪ್ರಶಿಕ್ಷಕರ ಸಭೆಯ ಕುರಿತು ಲಘುಭಾಷಣ ನೀಡಿದರು. ಉಪಾಹಾರದ ನಂತರ, 600 ಅಭ್ಯಾಸಿಗಳು ತಾವು ವೈಯಕ್ತಿಕ ಬೈಠಕ್ ತೆಗೆದುಕೊಳ್ಳುವ ಪ್ರಶಿಕ್ಷಕರೊಂದಿಗೆ ಗುಂಪುಗಳನ್ನು ರಚಿಸಿದರು. ಸೋ. ಕಮಲೇಶ್‌ರವರು ನಿಗದಿತ ಸಮಯದಲ್ಲಿ ಸಾಧನೆ ಮಾಡುವ ಬಗ್ಗೆ ಒತ್ತು ನೀಡಿದ್ದಾರೆಂದು ಪ್ರಶಿಕ್ಷಕರು ವಿವರಿಸಿದರು. ಮನೆಯಲ್ಲಿ ಧ್ಯಾನ ಮಾಡಲು ತೊಂದರೆಯಾದಲ್ಲಿ ಅಂತಹ ಅಭ್ಯಾಸಿಗಳೆಲ್ಲ ಒಂದು ಸ್ಥಳದಲ್ಲಿ ಒಟ್ಟುಗೂಡಿ ಧ್ಯಾನ ಮಾಡಬಹುದೆಂದು ಸೂಚಿಸಲಾಯಿತು. ಸಾಧನೆಯಲ್ಲಿ ಉತ್ಸಾಹ ಸೃಷ್ಟಿಸುವುದು ಇದರ ಮುಖ್ಯ ಉದ್ದೇಶವಾಗಿದ್ದಿತು. ಫಲಿತಾಂಶವನ್ನು ಕಾಣಲು ಕನಿಷ್ಠ ಹತ್ತು ದಿನಗಳವರೆಗೆ ನಿಷ್ಠೆಯಿಂದ ಸಾಧನೆ ಮಾಡತಕ್ಕದ್ದು ಎಂಬುದು ಸೋದರ ಕಮಲೇಶ್‌ರವರ ಸಲಹೆ. ಚರ್ಚೆಯ ನಂತರ, ಕೇಳಿದುದನ್ನೆಲ್ಲ ಮಾಡಿ ತೋರಿಸಬೇಕೆಂಬ ಉತ್ಸಾಹದೊಡನೆ ಅಭ್ಯಾಸಿಗಳು ಮರಳಿದರು. ಪ್ರಸ್ತುತ, ನಗರದಲ್ಲಿ ಮುಂಜಾನೆ 6 ಗಂಟೆಯ ಸತ್ಸಂಗವು ಎರಡು ಸ್ಥಳಗಳಲ್ಲಿ ನಡೆಯುತ್ತಿದೆ.

## ವಿಟ್ಲ, ಕರಾವಳಿ ಕರ್ನಾಟಕ

'ಗುರಿ' ಎಂಬ ವಿಷಯಾಧಾರಿತ ಪೂರ್ಣದಿನದ ಕಾರ್ಯಕ್ರಮವನ್ನು ಸೆಪ್ಟೆಂಬರ್ 21ರಂದು ನಡೆಸಲಾಯಿತು. ಪಾಲ್ಗೊಂಡ ಹದಿನಾರು ಅಭ್ಯಾಸಿಗಳು, ಸಾಧನೆಯೊಂದಿಗೆ ಹೇಗೆ ತಮ್ಮ ಗುರಿಯ ಆಲೋಚನೆಯು ಬದಲಾವಣೆ ಹೊಂದಿತು ಎಂಬುದನ್ನು ಚರ್ಚಿಸುವುದರೊಂದಿಗೆ ಕಾರ್ಯಕ್ರಮವನ್ನು ಪ್ರಾರಂಭಿಸಿದರು. ಬಾಬೂಜಿ ಮಹಾರಾಜರ ಪುಸ್ತಕಗಳ ಸಾರವನ್ನು ಓದಿದ ನಂತರ, ಅಭ್ಯಾಸಿಗಳಿಗೆ ಜೀವನದ ನಿಜವಾದ ಗಿರಿಯೆಂದರೆ 'ಗುರು' ಎಂದು ಮನದಟ್ಟಾಯಿತು. ಅವರು ಗುರಿ ಸಾಧನೆಯ ವಿವಿಧ ಮಾರ್ಗಗಳನ್ನು ಚರ್ಚಿಸಿದರು ಹಾಗು ಪ್ರಾರ್ಥನೆಯ ಮೊದಲನೆಯ ಸಾಲು, "ನೀನೇ ಮಾನವ ಜೀವನದ ನಿಜವಾದ ಗುರಿ" ಯ ಅರ್ಥವನ್ನು ಅವಲೋಕನ ಮಾಡುವುದರೊಂದಿಗೆ ಕಾರ್ಯಕ್ರಮವು ಸಮಾಪ್ತವಾಯಿತು.



## ಗ್ರೌಂಡಿಂಗ್ ಇನ್ ದ ಪ್ರಾಕ್ಟೀಸ್

ಭಾರತದ ಅನೇಕ ಕೇಂದ್ರಗಳಲ್ಲಿ ಈ ತರಬೇತಿ ಕಾರ್ಯಕ್ರಮಗಳು ಅತ್ಯಂತ ಭರದಿಂದ ಸಾಗುತ್ತಿವೆ. ತರಬೇತಿಯಲ್ಲಿ ಧ್ಯಾನ, ಶುದ್ಧೀಕರಣ, ದಿನಚರಿ ಬರಹ ಮತ್ತು ಪ್ರಾರ್ಥನೆ ಎಂಬ ನಾಲ್ಕು ವಿಭಾಗಗಳಿವೆ.



ಬಿಕನೇರ್

ಸೆಪ್ಟೆಂಬರ್ 26ರಂದು, ರಾಜಸ್ಥಾನದ **ಬಿಕನೇರ್**ನಲ್ಲಿ ಆಯೋಜಿಸಿದ ಕಾರ್ಯಾಗಾರದಲ್ಲಿ ಬಿಕನೇರ್, ಲದ್ನುನ್, ಜಸ್ವಂತ್‌ಗಢ, ದೀದ್ವಾನ, ಕಥೇರ ಮತ್ತು ಶ್ರೀಗಂಗಾನಗರ ಕೇಂದ್ರಗಳಿಂದ ಸುಮಾರು 85 ಅಭ್ಯಾಸಿಗಳು ಪಾಲ್ಗೊಂಡರು.



ಗೋವಾ

**ಗೋವಾ**ದಲ್ಲಿ ಆಗಸ್ಟ್16 ಮತ್ತು 17ರಂದು ನಡೆಸಲಾದ ಕಾರ್ಯಕ್ರಮದಲ್ಲಿ ಗೋವಾ, ಕಾರವಾರ ಮತ್ತು ಕೊಲ್ಲಾಪುರದಿಂದ 32 ಅಭ್ಯಾಸಿಗಳು ಪಾಲ್ಗೊಂಡರು.



ತ್ರಿಪ್ರಯಾರ್

ಕೇರಳದ **ತ್ರಿಪ್ರಯಾರ್** ಆಶ್ರಮದಲ್ಲಿ ಅಕ್ಟೋಬರ್ 12ರಂದು ನಡೆದ ಕಾರ್ಯಕ್ರಮದಲ್ಲಿ 34 ಅಭ್ಯಾಸಿಗಳಿ ಭಾಗವಹಿಸಿದರು.



ಹಾಪುರ್

ಉತ್ತರ ಪ್ರದೇಶದ **ಹಾಪುರ್** ಆಶ್ರಮದಲ್ಲಿ ಸೆಪ್ಟೆಂಬರ್ 7ರಂದು ನಡೆದ ಕಾರ್ಯಕ್ರಮದಲ್ಲಿ 87 ಅಭ್ಯಾಸಿಗಳು ಪಾಲ್ಗೊಂಡಿದ್ದರು.

## ಸುದ್ದಿ ಪ್ರಸರಣ

ಭಾರತದ ಅನೇಕ ಕೇಂದ್ರಗಳಲ್ಲಿ ನಡೆದ ಮುಕ್ತಸಭೆಗಳ ವರದಿಗಳನ್ನು ಎಖೋಸ್ ತಂಡವು ಪಡೆದಿದೆ. ಈ ಕೆಳಗಿನವು ಕಾರ್ಯಕ್ರಮಗಳ ಕೆಲವು ಚಿತ್ರಗಳು.



ಆಗ್ರಾ



ಗ್ವಾಲಿಯರ್



ಪುಳಿಯಂಪಟ್ಟಿ



ಖತೌಲಿ



ವಲ್ಸಾಡ್



ಭಿಲ್ವಾರ


## ಹೊಸ ಪ್ರಕಟನೆಗಳು




ವಾಟ್ ಈಜ಼್ ಸಹಜ್‌ಮಾರ್ಗ್ ಆಂಗ್ಲ



ಸಹಜಮಾರ್ಗ ಒಂದು ಪರಿಚಯ




ಡಿವೋಶನ್ ಆಂಗ್ಲ




ಹಾರ್ಟ್‌ಸ್ಪೀಕ್ 2011 ಮರಾಠಿ




ಹಾರ್ಟ್‌ಸ್ಪೀಕ್ 2013 ಆಂಗ್ಲ



ಹಾರ್ಟ್‌ಸ್ಪೀಕ್ 2011 ಹಿಂದಿ



ಮೈ ಮಾಸ್ಟರ್ ಎಂಪಿ3 ಆಡಿಯೊಪುಸ್ತಕ ಗುಜರಾತಿ

## ತುಣುಕುಗಳು






### ಬಾಲಿಯ, ಉತ್ತರಪ್ರದೇಶ

ಬಾಲಿಯಾದ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಸೆಪ್ಟೆಂಬರ್ 14ರಂದು ಯುವ ಸಭೆಯನ್ನು ನಡೆಸಲಾಯಿತು. 'ತಾರುಣ್ಯ: ಪ್ರತಿಜ್ಞೆ ಮತ್ತು ಪರಿಶ್ರಮಕ್ಕೆ ಸಕಾಲ' ಎಂಬದು ವಿಷಯವಾಗಿದ್ದಿತು. ಸುಮಾರು 100 ವಿದ್ಯಾರ್ಥಿಗಳು ಹಾಗು 25 ಶಿಕ್ಷಕರು ಮತ್ತು ಪಾಲಕರು ಸಭೆಯಲ್ಲಿ ಭಾಗವಹಿಸಿದರು.

### ಚಿಣ್ಣರು ಮತ್ತು ಯುವ ಕೇಂದ್ರ, ಕೋಲ್ಕಾತಾ

ಕೊಲ್ಕಾತಾ ಆಶ್ರಮಕ್ಕೆ ಬರುವ ಮಕ್ಕಳ ಸಂಖ್ಯೆಯ ಹೆಚ್ಚಳವನ್ನು ಗಮನಿಸಿ, ಗುರುಗಳ ಅನುಗ್ರಹ ಮತ್ತು ಅನುಮತಿಯೊಂದಿಗೆ ಮಕ್ಕಳು ಮತ್ತು ಯುವ ಕೇಂದ್ರಕ್ಕಾಗಿ ಕೋಣೆಯೊಂದನ್ನು ನಿಗದಿ ಮಾಡಲಾಯಿತು. ಮಕ್ಕಳು ಆಟವಾಡುತ್ತಿದ್ದ ಸ್ಥಳದಲ್ಲಿ ಈ ಕೋಣೆಯು ಸರಳವಾಗಿ ನಿರ್ಮಾಣಗೊಂಡಿದೆ. ನಿಗದಿತ ಸ್ವಯಂಸೇವಕರ ಸಹಾಯದಿಂದ ಮಕ್ಕಳು ಸೆಪ್ಟೆಂಬರ್ 14ರಂದು ಈ ಸ್ಥಳವನ್ನು ಉದ್ಘಾಟಿಸಿದರು.

## ಮೌಲ್ಯಾಧಾರಿತ ಶಿಕ್ಷಣದ ನೂತನ ಮಾಹಿತಿ

### ನವದೆಹಲಿ

ಏಪ್ರಿಲ್ 2014ರಂದು ಎಂಬಿಯೆನ್ಸ್ ಪಬ್ಲಿಕ್ ಶಾಲೆಯಲ್ಲಿ ಈ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ವಾರಕ್ಕೊಮ್ಮೆ ತರಗತಿಯನ್ನು ನಡೆಸಲಾಗುತ್ತಿದೆ. ಪ್ರಾರಂಭದಲ್ಲಿ ಮಕ್ಕಳು ಅಷ್ಟೇನೂ ಉತ್ಸಾಹ ತೋರದಿದ್ದರೂ, ಮೊದಲ ಮೂರು ಪಾಠಗಳು ಮುಗಿಯುತ್ತಿದ್ದಂತೆ 8–12ನೇ ತರಗತಿಯ ವಿದ್ಯಾರ್ಥಿಗಳು ಪಠ್ಯದಲ್ಲಿ ಆಸಕ್ತಿ ಪಡೆದರು. ಇದುವರೆಗೆ ಧೈರ್ಯ, ಪ್ರಾಮಾಣಿಕತೆ ಮತ್ತು ವಿನಯ – ಈ ಮೂರು ಗುಣಗಳನ್ನು ಕಲಿಸಲಾಗಿದೆ. 'ವಿನಯ'ವನ್ನು ಮೌಲ್ಯದಂತೆ ಕಾಣಲು ವಿರೋಧವನ್ನೂ ವ್ಯಕ್ತಪಡಿಸಲಾಗಿದ್ದಿತು. ಎಷ್ಟೇ ಚಿಕ್ಕದಾದರೂ ಸಹ ಈ ಪಾಠಗಳಿಂದ ಪ್ರತಿಯೊಂದು ವಿದ್ಯಾರ್ಥಿಯೂ ಏನನ್ನಾದರೂ ಕಲಿಯುತ್ತಿರುವನು.

ಎರಡನೆಯದಾಗಿ, ಪಶ್ಚಿಮ ದೆಹಲಿಯ ವಿದ್ಯಾಭಾರತಿ ಶಿಕ್ಷಣ ಸಂಸ್ಥೆಯಲ್ಲಿ 8 ಮತ್ತು 9ನೆಯ ತರಗತಿಯ ವಿದ್ಯಾರ್ಥಿಗಳಿಗಾಗಿ ಜುಲೈ 2014ರಿಂದ ಪಾಠಗಳನ್ನು ಪ್ರಾರಂಭಿಸಲಾಗಿದೆ. ಶಾಲೆಯಲ್ಲಿ ಅಧಿಕ ಸಂಖ್ಯೆಯ ವಿದ್ಯಾರ್ಥಿಗಳಿದ್ದು, ಎರಡು ತರಗತಿಯ 7 ವರ್ಗಗಳಿಂದ ಸುಮಾರು 400 ಮಕ್ಕಳಿದ್ದಾರೆ. ಎರಡೂ ಶಾಲೆಗಳು ದೆಹಲಿಯ ವಿವಿಧ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಸ್ಥಿತವಾಗಿವೆ. ಆದರೂ ಸಹ, ಪ್ರತಿಕ್ರಿಯೆಯು ಬಹುಮಟ್ಟಿಗೆ ಒಂದೇ ಆಗಿದೆ.

### ಮುಂಬೈ, ಮಹಾರಾಷ್ಟ್ರ

ಆಗಸ್ಟ್ 27ರಂದು ನಾಗೋಥಾಣೆಯ ಜೆಎಚ್ ಅಂಬಾನಿ ವಿದ್ಯಾಮಂದಿರ ಮರಾಠಿ ಮಾಧ್ಯಮ ಶಾಲೆಯಲ್ಲಿ ನಡೆದ ಜಾಗೃತಿ ಕಾರ್ಯಕ್ರಮದಲ್ಲಿ ಸುಮಾರು 45 ಶಿಕ್ಷಕರು ಪಾಲ್ಗೊಂಡಿದ್ದರು. ಸೀಮಾ ತ್ರಿಪಾಠಿಯವರು ಕಾರ್ಯಕ್ರಮವನ್ನು ಸೂಕ್ಷ್ಮವಾಗಿ, ಆದರೆ ಪರಿಣಾಮಕಾರಿಯಾಗಿ ನಡೆಸಿಕೊಟ್ಟರು. ಸಭೆಯ ಕೊನೆಯಲ್ಲಿ, ಕೆಲವು ಶಿಕ್ಷಕರು ಧ್ಯಾನದ ಕುರಿತು ವಿಚಾರಣೆ ಮಾಡಿದರು. ಐದಾರು ಶಿಕ್ಷಕರು 8 ಮತ್ತು 9ನೇ ತರಗತಿಯ ಪಾಠಗಳನ್ನು ಹೇಳಿಕೊಟ್ಟು, ಸ್ವಯಂಸೇವಕರಿಗೆ ಸಹಕರಿಸುವುದಾಗಿ ಹೇಳಿದರು. ಮಕ್ಕಳು ಮಾನವೀಯ ಗುಣಗಳನ್ನು ಹೊಂದಿದ ಮನುಷ್ಯರಾಗಿ ಬೆಳೆಯಲು ಮೌಲ್ಯಾಧಾರಿತ ಶಿಕ್ಷಣವು ಅಗತ್ಯವೆಂದು ಪ್ರಾಂಶುಪಾಲರು ಹೇಳಿದರು. ಅವರು ಸ್ವಯಂಸೇವಕರಿಗೆ ತಮ್ಮ ಸಂಪೂರ್ಣ ಸಹಕಾರವನ್ನೀಯುವೆನೆಂದು ವಚನವಿತ್ತರು.

ನಿಮಗೆ ನಿಮ್ಮ ಕೇಂದ್ರದ ಶಾಲೆಯಲ್ಲಿ ಮೌಲ್ಯಾಧಾರಿತ ಶಿಕ್ಷಣವನ್ನು ಪ್ರಾರಂಭಿಸುವ ಇಚ್ಛೆಯಿದ್ದಲ್ಲಿ, vbe@shpt.in ಗೆ ಈಮೇಲ್ ಕಳುಹಿಸಿ ಅಥವಾ ನಿಮ್ಮ ವಲಯಮುಖ್ಯಸ್ಥರನ್ನು ಸಂಪರ್ಕಿಸಿ.

## ಶೋಲವಂದನ ಆಶ್ರಮ, ತಮಿಳುನಾಡು

**ಪ್ರಭಾಕೇಂದ್ರ**





ಮದುರೈಯಿಂದ 28 ಕಿ.ಮೀ. ದೂರದಲ್ಲಿರುವ ಶೋಲವಂದನವು ಗ್ರಾಮ ಪಂಚಾಯತಿಯಾಗಿದೆ. ಆಗಸ್ಟ್ 5, 1987ರಂದು ಡಾ. ಸದಯಾಂಡಿಯವರು ತಮ್ಮ ಮನೆಯಲ್ಲಿ SRCM ಕೇಂದ್ರವನ್ನು ಪ್ರಾರಂಭಿಸಿದರು. ಆರಂಭದ ದಿನಗಳಲ್ಲಿ ಸುಮಾರು ಹದಿನೈದು ಅಭ್ಯಾಸಿಗಳು ಸತ್ಸಂಗದಲ್ಲಿ ಹಾಜರಿರುತ್ತಿದ್ದರು. 70 ಮತ್ತು 80ರ ದಶಕದಲ್ಲಿ ಗುರುಗಳು ಶೋಲವಂದನಕ್ಕೆ ಅನೇಕ ಬಾರಿ ಭೇಟಿ ನೀಡಿ ಡಾ. ಸದಯಾಂಡಿಯವರ ಮನೆಯಲ್ಲಿ ಸತ್ಸಂಗಗಳನ್ನು ನಡೆಸಿದ್ದಾರೆ. ಕೇಂದ್ರದ ಬೆಳವಣಿಗೆಯಲ್ಲಿ ಅವರು ವೈಯಕ್ತಿಕ ಆಸಕ್ತಿಯನ್ನು ತೋರಿದ್ದರು.



### ಆಶ್ರಮ

ಆಶ್ರಮದ ಅಗತ್ಯ ಕಾಣುತ್ತಲೆ ಡಾ. ಸದಯಾಂಡಿರವರು ಶೋಲವಂದನ ರೇಲ್ವೆ ನಿಲ್ದಾಣದ ಬಳಿ 2 ಎಕರೆ 43 ಸೆಂಟುಗಳಷ್ಟು ಜಾಗವನ್ನು ಖರೀದಿ ಮಾಡಿ ಅದರಲ್ಲಿ 1 ಎಕರೆ 20 ಸೆಂಟುಗಳಷ್ಟು ಜಾಗವನ್ನು ಆಶ್ರಮಕ್ಕೆ ನೀಡಿದರು. ಅಭ್ಯಾಸಿಗಳ ದೇಣಿಗೆ ಮತ್ತು ಕೇಂದ್ರಕಚೇರಿಯದ ಸಹಾಯದಿಂದ ಆಶ್ರಮದ ನಿರ್ಮಾಣವು 1996ನಲ್ಲಿ ಪ್ರಾರಂಭವಾಯಿತು. ಜಂಟಿ ನಿರ್ದೇಶಕರಾದ ಸೋ.ಎ.ಪಿ ದೊರೈರವರು ನಿರ್ಮಾಣ ನಡೆಯುತ್ತಿದ್ದಾಗ ಆಗಸ್ಟ್ 24, 1998ರಲ್ಲಿ ಭೇಟಿ ನೀಡಿ ಅಗತ್ಯ ಸಹಾಯವನ್ನು ನೀಡಿದರು. ಆಶ್ರಮವನ್ನು ಮೇ 12, 1999ರಂದು ನೋಂದಣೀಕರಿಸಲಾಯಿತು ಹಾಗು ಗುರುಗಳು ಜನವರಿ 12, 2000ರಂದು ಉದ್ಘಾಟಿಸಿದರು. ಸಮಾರಮ್ಭದಲ್ಲಿ ಸುಮಾರು 300ಕೂ ಅಧಿಕ ಅಭ್ಯಾಸಿಗಳು ಹಾಜರಿದ್ದರು.



ಧ್ಯಾನಮಂದಿರವು 52 X 22 ವಿಸ್ತೀರ್ಣ ಹೊಂದಿದ್ದು ಸುಮಾರು 200 ಅಭ್ಯಾಸಿಗಳಿಗೆ ಸ್ಥಳಾವಕಾಶ ನೀಡುತ್ತದೆ. ಜೊತೆಯಲ್ಲಿ, ಪಾಕಶಾಲೆ, ವಾಚನಾಲಯ ಮತ್ತು ಶೌಚಾಲಯಗಳು ಆಶ್ರಮದಲ್ಲಿವೆ. ಅನೇಕ ಮುಕ್ತ ಸಭೆಗಳ ಕಾರಣದಿಂದ ಅಭ್ಯಾಸಿಗಳ ಸಂಖ್ಯೆಯು ನಿಯತವಾಗಿ ಹೆಚ್ಚಳ ಕಂಡಿದ್ದು, ಪ್ರಸ್ತುತ 110 ಅಭ್ಯಾಸಿಗಳು ಭಾನುವಾರದ ಸತ್ಸಂಗದಲ್ಲಿ ಪಾಲ್ಗೊಳ್ಳುತ್ತಾರೆ. ತಿಂಗಳ ಪ್ರತಿ ಮೂರನೆ ಭಾನುವಾರದಂದು ಪೂರ್ಣದಿನದ ಕಾರ್ಯಕ್ರವನ್ನು ನಡೆಸಲಾಗುತ್ತಿದೆ ಹಾಗು ನಾಲ್ಕನೆ ಭಾನುವಾರವನ್ನು ಸ್ವಯಂಸೇವೆಗೆ ಮೀಸಲಾಗಿರಿಸಲಾಗಿದೆ. ಕೇಂದ್ರದಲ್ಲಿ ಸಕ್ರಿಯ ತರುಣರ ತಂಡವು ಆಧ್ಯಾತ್ಮಿಕ ಅರಿವನ್ನು ಮೂಡಿಸುತ್ತಿದೆ. ಕ್ರೆಸ್ಟ್ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು, ಸಾಧನೆಯ ಅರಿವು ಮೂಡಿಸುವ ಕಿರುನಾಟಕಗಳ ಪ್ರದರ್ಶನ, ಚರ್ಚೆಗಳು ಮತ್ತು ಕೌಶಲ್ಯ ಹೆಚ್ಚಿಸುವ ಕಾರ್ಯಕ್ರಮಗಳಲ್ಲಿ ಭಾಗವಸುತ್ತಾರೆ. ಈ ಕೇಂದ್ರವು ಸಮೀಪದ ದಿಂಡಿಗಲ್, ಬಟ್ಲಗುಂಡು ಮತ್ತು ವಡಿಪಟ್ಟಿ ಉಪಕೇಂದ್ರಗಳ ಶೈಶವಾವಸ್ಥೆಯಲ್ಲಿ ಅವುಗಳಿಗೆ ಸಹಕಾರ ನೀಡಿದೆ.



To download or subscribe to this newsletter, please visit http://www.sahajmarg.org/newsletter/india For feedback, suggestions and news articles please send email to in.newsletter@srcm.org
© 2014 Shri Ram Chandra Mission ("SRCM"). All rights reserved. "Shri Ram Chandra Mission", "Sahaj Marg", "SRCM", "Constant Remembrance" and the Mission's Emblem are registered Trademarks of Shri Ram Chandra Mission.This Newsletter is intended exclusively for the members of SRCM. The views expressed in the various articles are provided by various volunteers and are not necessarily those of SRCM.